www.veerashaivamahasabha.org e-mail: info@veerashaivamahasabha.com

# ಅಖಿಲ ಭಾರತ ವೀರಶೈವ ಮಹಾಸಭಾ (ರಿ.)

ನಂ.17/4, 'ವೀರಶೈವ-ಲಿಂಗಾಯತ ಭವನ', ರಮಣಮಹರ್ಷಿರಸ್ತೆ, ಸದಾಶಿವನಗರ, ಬೆಂಗಳೂರು-560 080,
Tel: 080-2360 2177, Tel Fax:080-2361 8400

ಸಂಖ್ಯೆ: ಎ.ಜಿ.ಎಂ./2017-18 ದಿನಾಂಕ: 09-12-2017

## 43ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯ ತಿಳುವಳಿಕೆ ಪತ್ರ

ಅಖಿಲ ಭಾರತ ವೀರಶೈವ ಮಹಾಸಭೆಯ 2016-17ನೇ ಸಾಲಿನ 43ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ಮಹಾಸಭೆಯಅಧ್ಯಕ್ಷರಾದ **ಡಾ. ಶಾಮನೂರು ಶಿವಶಂಕರಪ್ಪ, ಶಾಸಕರು ಹಾಗೂ ಮಾಜಿ ಸಚಿವರು ಇವರ ಅಧ್ಯಕ್ಷತೆಯಲ್ಲಿ "ತರಳಬಾಳು ಕೇಂದ್ರ ಸಭಾಂಗಣ", 3ನೇ ಮುಖ್ಯರಸ್ತೆ, 2ನೇ ಬ್ಲಾಕ್, ತರಳಬಾಳು ಮಾರ್ಗ, ಆರ್.ಟಿ.ನಗರ, (ಬಿ.ಡಿ.ಎ.ಕಾಂಪ್ಲೆಕ್ಸ್ ಪಕ್ಕ), ಬೆಂಗಳೂರು-560 032 ಇಲ್ಲಿ ದಿನಾಂಕ: 07-01-2018ನೇ ಭಾನುವಾರ ಮಧ್ಯಾಹ್ನ 12.00 ಗಂಟೆಗೆ ಈ ಕೆಳಗಿನ ಕಾರ್ಯಸೂಚಿಯಲ್ಲಿ ತಿಳಿಸಿರುವ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲು ಕರೆಯಲಾಗಿದೆ.** ಆದ್ದರಿಂದ ಸರ್ವಸದಸ್ಯರ ಸಾಮಾನ್ಯ ಸಭೆಯ ಸದಸ್ಯರಾದ ತಾವು ಈ ಸಭೆಗೆ ಆಗಮಿಸಬೇಕಾಗಿ ವಿನಂತಿ

**ಕಾರ್ಯಸೂಚಿ**

1. ಪ್ರಾರ್ಥನೆ
2. ಸ್ವಾಗತ
3. ಶ್ರದ್ಧಾಂಜಲಿ
4. ಸಭೆಯ ತಿಳುವಳಿಕೆ ಪತ್ರ ಓದಿ ದಾಖಲಿಸುವುದು
5. ದಿನಾಂಕ 25-12-2016ರಂದು ನಡೆದ ಹಿಂದಿನ ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು
6. 2016-17ನೇ ಸಾಲಿನ **"ವಾರ್ಷಿಕ ವರದಿ"** ಮಂಡನೆ-ಅಂಗೀಕಾರ
7. 2016-17ನೇ ಸಾಲಿನ **"ಲೆಕ್ಕಪರಿಶೋಧಕರ ವರದಿ"** ಮಂಡನೆ ಮತ್ತುಅಂಗೀಕಾರ
8. 2017-18ನೇ ಸಾಲಿನ ಮಹಾಸಭೆಯ ವಾರ್ಷಿಕಆಯ-ವ್ಯಯದ (ಆದಾಯ-ವೆಚ್ಚಗಳ) ಅಂದಾಜು ಪಟ್ಟಿಯ ಮಂಡನೆ ಹಾಗೂ ಅಂಗೀಕಾರ
9. 2017-18ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತುಅವರ ಸಂಭಾವನೆಯನ್ನುಗೊತ್ತುಪಡಿಸುವುದು
10. ಅಧ್ಯಕ್ಷರಅಪ್ಪಣೆ ಮೇರೆಗೆ ಬರಬಹುದಾದಇತರೆ ವಿಷಯಗಳು
11. ಅಧ್ಯಕ್ಷರ ಭಾಷಣ
12. ವಂದನಾರ್ಪಣೆ

**(ಈಶ್ವರ ಖಂಡ್ರೆ, ಸಚಿವರು)**
ಮಹಾಪ್ರಧಾನ ಕಾರ್ಯದರ್ಶಿ

**ವಿಶೇಷ ಸೂಚನೆ:**

1. ಸಭೆಯಲ್ಲಿಚರ್ಚಿಸಲಿಚ್ಛಿಸುವ ವಿಷಯಗಳನ್ನು ಟಿಪ್ಪಣಿಯೊಂದಿಗೆ ಮಾನ್ಯ ಸದಸ್ಯರು ದಿನಾಂಕ: 25-12-2017ರೊಳಗಾಗಿ ಕೇಂದ್ರಕಛೇರಿಗೆ ಕಳುಹಿಸಿಕೊಡಲು ಕೋರಿದೆ.
2. 2016-17ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪರಿಶೋಧಕರು ಪರಿಶೀಲಿಸಿದ ಲೆಕ್ಕ-ಪತ್ರಗಳು ಹಾಗೂ ಲೆಕ್ಕಪರಿಶೋಧಕರ ವರದಿಯ ಪ್ರತಿಗಳನ್ನು ಮಾನ್ಯ ಸದಸ್ಯರುಗಳಿಗೆ ಸಭೆಯ ಮುಂಚಿತವಾಗಿ ವಿತರಿಸಲಾಗುವುದು ಹಾಗೂ ಇದನ್ನು ಮಹಾಸಭೆಯ ವೆಬ್‌ಸೈಟ್ ನಲ್ಲಿ ದಿನಾಂಕ 20-12-2017ರಿಂದ ವೀಕ್ಷಿಸಬಹುದು.
3. ಈ ಸಭೆಗೆ ಆಗಮಿಸುವ ಸದಸ್ಯರು ಮಹಾಸಭೆಯ ಗುರುತಿನ ಚೀಟಿ ಅಥವಾ ಯಾವುದಾದರೂ ಗುರುತಿನ ಚೀಟಿ ಹಾಗೂ ಈ ತಿಳುವಳಿಕೆ ಪತ್ರವನ್ನು ತಮ್ಮೊಡನೆ ತರಬೇಕೆಂದು ವಿನಂತಿಸಲಾಗಿದೆ.

ಗೆ,
ಮಹಾಸಭೆಯ ಸಾಮಾನ್ಯ ಸಭೆಯ ಸದಸ್ಯರುಗಳಿಗೆ.
**ವಿ.ಸೂ.: ಮಹಾಸಭೆಯ ಸಾಮಾನ್ಯ ಸಭೆಯ ಸದಸ್ಯರುಗಳಿಗೆ ಮಾತ್ರ ಪ್ರವೇಶ.**

www.veerashaivamahasabha.org e-mail: info@veerashaivamahasabha.com

# All India Veerashaiva Mahasabha (R.)

No.17/4, 'Veerashaiva-LingayathBhavan', Ramanamaharshi Road (Bellary Road), Sadashivanagar, Bangalore-560 080, Tel: 080-2360 2177, Tel Fax:080-2361 8400

**No: AGM/2017-18** **Date: 09-12-2017**

## 43rd ANNUAL GENERAL BODY MEETING NOTICE

The Meeting of the 43rd Annual General Body of All India Veerashaiva Mahasabha for the Year 2016-17 is convened on **Sunday, the 7th January, 2018 at 12.00 p.m. at "Taralabalu Kendra Sabhangana", 3rd Main, 2nd Block, TalarabaluMarga, next to BDA Complex, R.T.Nagar, Bangalore-560 032** to discuss and approve the subjects mentioned in the Agenda below. **Dr. Shamanur Shivashankarappa,** M.LA., Ex-Ministerand President of the Mahasabha will preside over the Meeting. All the members of the General Body of the Mahasabha are therefore, requested to make it convenient to attend the Meeting.

**AGENDA**

1. Invocation
2. Welcome
3. Obituary references
4. To read and record the Meeting Notice
5. To read & confirm the Proceedings of the previous Annual General Body Meeting held on 25-12-2016
6. To present the Annual Report for the year 2016-17
7. To present the Audit Report for the year 2016-17
8. To present the Budget proposal for the year 2017-18
9. Appointing Auditor for the year 2017-18 and to fix the fee
10. Any other subjects with the permission of the Chair
11. President's speech
12. Vote of thanks

**(Eshwar Khandre, Minister)**
Secretary General

**NOTE:**

1. The members desiring to discuss any other subjects are requested to send a brief note so as to reach the Mahasabha Office on or before 25-12-2017
2. The Annual Report for 2016-17 and Audit Reports will be uploaded on website www.veerashaivamahasabha.org on 20-12-2017 and copies will also be distributed to the members before commencement of the meeting
3. The Members are requested to come with meeting notice and Mahasabha I.D. Card or any other I.D.Card

To,
The General Body Members of the Mahasabha.

**P.S:- Admission restricted to the General Body Members of the Mahasabha.**

# ಅಖಿಲ ಭಾರತ ವೀರಶೈವ ಮಹಾಸಭಾ (ರಿ.)

ನಂ.17/4 'ವೀರಶೈವ-ಲಿಂಗಾಯತ ಭವನ', ಸದಾಶಿವನಗರ ಬೆಂಗಳೂರು-560080

## ದಿನಾಂಕ 25-12-2016 ರಂದು ನಡೆದ 42ನೇ ವಾರ್ಷಿಕ (2015-16ನೇ ಸಾಲಿನ) ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಗಳು

ಮಹಾಸಭೆಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವರು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 25-12-2016ರಂದು ಭಾನುವಾರ ಬೆಳಗ್ಗೆ 11-30 ಗಂಟೆಯಿಂದ 3.30 ಗಂಟೆಯವರೆಗೆ **'ತರಳಬಾಳು ಕೇಂದ್ರ ಸಭಾಂಗಣ', 3ನೇ ಮುಖ್ಯರಸ್ತೆ, 2ನೇ ಬ್ಲಾಕ್, ತರಳಬಾಳು ಮಾರ್ಗ, ಆರ್.ಟಿ.ನಗರ, ಬೆಂಗಳೂರು-560 052'** ಇಲ್ಲಿ ನಡೆದ 42ನೇ ವಾರ್ಷಿಕ (2015-16ನೇ ಸಾಲಿನ) ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಗಳು.

ಅಧ್ಯಕ್ಷರ ಅನುಮತಿಯ ಮೇರೆಗೆ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಜಿ.ಎಂ.ಧನಂಜಯ ಐ.ಎ.ಎಸ್.(ನಿ.) ಇವರ ನಿರೂಪಣೆಯೊಂದಿಗೆ ಸಭೆಯು ಪ್ರಾರಂಭವಾಯಿತು. ಸಭೆಯಲ್ಲಿ ಒಟ್ಟು **497** ಸದಸ್ಯರು ಭಾಗವಹಿಸಿದ್ದರು.

ಮಹಾಸಭೆಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು, ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈಶ್ವರ್ ಖಂಡ್ರೆಯವರು, ಕಾರ್ಯದರ್ಶಿಗಳಾದ ಶ್ರೀ ಜಿ.ಗುರುಬಸಪ್ಪ ಹಾಗೂ ಬಾಗಲಕೋಟೆ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಮಲ್ಲೇಶಪ್ಪ ಜಿಗಜಿನ್ನಿ ಇವರುಗಳು ಸಭೆಗೆ ಗೈರುಹಾಜರಾಗುವ ಬಗ್ಗೆ ಅಧ್ಯಕ್ಷರಿಗೆ ದೂರವಾಣಿ/ಪತ್ರ ಮುಖೇನ ಅನುಮತಿಯನ್ನು ಕೋರಿರುತ್ತಾರೆ.

**ವಿಷಯ ನಂ 1 :- ಪ್ರಾರ್ಥನೆ.**

ಕುಮಾರಿ ಸ್ನೇಹಾರವರ ಪ್ರಾರ್ಥನೆ ಹಾಗೂ **"ಮಹಾಸಭಾ ಗೀತೆ"**ಯೊಂದಿಗೆ ಸಭೆಯು ಪ್ರಾರಂಭವಾಯಿತು.

**ವಿಷಯ ನಂ 2 :- ಸ್ವಾಗತ.**

**ಕಾರ್ಯದರ್ಶಿಗಳಾದ ಶ್ರೀ ಕೆ.ಎನ್.ಜಯಲಿಂಗಪ್ಪ ಇವರು** ಪ್ರಥಮವಾಗಿ ಅಖಿಲ ಭಾರತ ವೀರಶೈವ ಮಹಾಸಭೆಯ ಸಂಸ್ಥಾಪಕರಾದ ಪೂಜ್ಯಶ್ರೀ ಹಾನಗಲ್ ಕುಮಾರ ಶಿವಯೋಗಿಗಳಿಗೂ, ಎಲ್ಲಾ ಹರ-ಗುರು ಚರಮೂರ್ತಿಗಳಿಗೂ ಹಾಗೂ 42ನೇ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಹಿರಿಯರಿಗೂ, ಸಮಾಜ ಬಂಧುಗಳಿಗೂ ಶರಣು ಶರಣಾರ್ಥಿಗಳನ್ನು ಅರ್ಪಿಸಿ, ಅಖಿಲ ಭಾರತ ವೀರಶೈವ ಮಹಾಸಭೆಯ 42ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿರುವ ಮಹಾಸಭೆಯ ಅಧ್ಯಕ್ಷರು, ನಮಗೆಲ್ಲರಿಗೂ ಹಿರಿಯರೂ, ಮಾಜಿ ಸಚಿವರೂ ಆಗಿರುವ ಸನ್ಮಾನ್ಯ ಡಾ.ಶಾಮನೂರು ಶಿವಶಂಕರಪ್ಪನವರಿಗೆ ಹೃತ್ಪೂರ್ವಕವಾಗಿ ಸ್ವಾಗತ ಬಯಸುತ್ತಾ, ಶ್ರೀಯುತರ ಅಧ್ಯಕ್ಷತೆಯಲ್ಲಿ ಇಂದಿನ ಈ ಸಭೆ ಸುಸೂತ್ರವಾಗಿ ನಡೆಯಲು ನಮಗೆಲ್ಲಾ ಮಾರ್ಗದರ್ಶನ ಮಾಡಬೇಕೆಂದು ಅವರಲ್ಲಿ ವಿನಂತಿಸಿಕೊಂಡರು.

ಮಹಾಸಭೆಯ ನಿಕಟಪೂರ್ವ ಅಧ್ಯಕ್ಷರಾದ ಡಾ. ಭೀಮಣ್ಣ ಖಂಡ್ರೆಯವರು ಎರಡುಬಾರಿ ಅಧ್ಯಕ್ಷರಾಗಿ ಅನೇಕ ಕೆಲಸಗಳನ್ನು ಮಾಡಿ ನಮಗೆಲ್ಲಾ ಸ್ಫೂರ್ತಿದಾಯಕರಾಗಿ ನಮ್ಮ ಮಧ್ಯೆ ಇದ್ದಾರೆ. ಅವರಿಗೂ ಕೂಡಾ ಹೃತ್ಪೂರ್ವಕ ಸ್ವಾಗತ

ಬಯಸಿದರು.

ಮಹಾಸಭೆಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು ಅನಾರೋಗ್ಯದ ನಿಮಿತ್ತ ಮಹಾಪ್ರಧಾನ ಕಾರ್ಯದರ್ಶಿಗಳು ಹಾಗೂ ಸಚಿವರು ಆದ ಶ್ರೀ ಈಶ್ವರ ಖಂಡ್ರೆಯವರು ಸಹ ಹೆಚ್ಚಿನ ಕಾರ್ಯಬಾರವಿದ್ದು, ಇವರುಗಳ ಅನುಪಸ್ಥಿತಿಯಲ್ಲಿ ಈರ್ವರಿಗೂ ಸ್ವಾಗತವನ್ನು ಬಯಸಿದರು. ಮಹಾಸಭೆಯ ಕೋಶಾಧ್ಯಕ್ಷರಾದ ಶ್ರೀಮತಿ ಸುನಂದ ಗಿರೀಶ್‌ರವರಿಗೆ ಸ್ವಾಗತಿಸಿದರು. ಮಹಾಸಭೆಯ ಉಪಾಧ್ಯಕ್ಷರುಗಳು, ಆಗಮಿಸಿದ್ದಾರೆ ಅವರೆಲ್ಲರಿಗೂ ಆದರದ ಸ್ವಾಗತ ಬಯಸಿದರು. ಹಾಗೆಯೇ ಮಹಾಸಭೆಯ ವಿವಿಧ ರಾಜ್ಯಗಳಾದ ತಮಿಳುನಾಡಿನ ಶ್ರೀ ನಾಗರತಿನಮ್ ಹಾಗೂ ಪದಾಧಿಕಾರಿಗಳು, ತೆಲಂಗಾಣದ ಶ್ರೀ ನೇತಿ ಮಹೇಶ್ವರಂ ಹಾಗೂ ಪದಾಧಿಕಾರಿಗಳು, ಕೇರಳದ ಶ್ರೀ ಕೆ.ವಿ.ಶಿವನ್ ಮತ್ತು ಪದಾಧಿಕಾರಿಗಳು ಮಹಾರಾಷ್ಟ್ರ ರಾಜ್ಯದ ಪದಾಧಿಕಾರಿಗಳು ಹಾಗೂ ಮಹಾಸಭೆಯ ರಾಷ್ಟ್ರೀಯ ಮಹಿಳಾ ವಿಭಾಗದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಕರ್ನಾಟಕ ರಾಜ್ಯ ಮಹಿಳಾ ವಿಭಾಗದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಯುವ ವಿಭಾಗದ ಪದಾಧಿಕಾರಿಗಳು ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಮಹಾಸಭೆಯ ಎಲ್ಲಾ ಹಂತದ ಘಟಕಗಳ ಪದಾಧಿಕಾರಿಗಳು ಹಾಗೂ ರಾಷ್ಟ್ರದ ಎಲ್ಲಾ ಭಾಗಗಳಿಂದ ಆಗಮಿಸಿರುವ ಸರ್ವಸದಸ್ಯರುಗಳಿಗೂ ಹೃತ್ಪೂರ್ವಕವಾಗಿ ಆದರದ ಸ್ವಾಗತವನ್ನು ಬಯಸಿದರು.

**ಉದ್ಘಾಟನೆ:–**

2015–16ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರು, ನಿಕಟಪೂರ್ವ ಅಧ್ಯಕ್ಷರಾದ ಡಾ.ಭೀಮಣ್ಣ ಖಂಡ್ರೆಯವರು ಹಾಗೂ ವೇದಿಕೆಯಲ್ಲಿದ್ದ ಎಲ್ಲಾ ಪದಾಧಿಕಾರಿಗಳು ದೀಪ ಬೆಳಗಿಸುವುದರ ಮೂಲಕ ಸಭೆಯ ಉದ್ಘಾಟನೆಯನ್ನು ನೆರವೇರಿಸಿದರು.

**ವಿಷಯ ನಂ 3 :– ಶ್ರದ್ಧಾಂಜಲಿ.**

ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ಕೆ.ಎನ್.ಜಯಲಿಂಗಪ್ಪನವರು ವಿಷಯವನ್ನು ಮಂಡಿಸಿದರು. 2015–16ನೇ ಸಾಲಿನಲ್ಲಿ ಪೂಜ್ಯರುಗಳು, ಸಮಾಜದ ಗಣ್ಯರು, ಸಮಾಜ ಬಂಧುಗಳು ಹಾಗೂ ಮಹಾಸಭೆಯ ಸದಸ್ಯರುಗಳಾದ,

| ಕ್ರಸಂ | ಲಿಂಗೈಕ್ಯರಾದ ಪೂಜ್ಯರು ಶರಣ/ಶರಣೆಯರು | ಸ್ಥಳ |
|---|---|---|
| 1. | **ಶ್ರೀಮ.ನಿ.ಪ್ರ.ರೇವಣಸಿದ್ಧ ಮಹಾಸ್ವಾಮಿಗಳು**<br>ಗೌರವ ಅಧ್ಯಕ್ಷರು, ಬಾಗಲಕೋಟೆ ತಾ॥ ಘಟಕ | ಬಾಗಲಕೋಟೆ |
| 2. | **ಪೂಜ್ಯ ರಾಜಶೇಖರ ಮಹಾಸ್ವಾಮಿಗಳು**<br>ವಿರಕ್ತಮಠ, ಡಿ.ಎಂ.ಕುರ್ಕೆ ಬೂದಿಹಾಳ್ | ಅರಸೀಕೆರೆ, ಹಾಸನ ಜಿಲ್ಲೆ |
| 3. | **ಪೂಜ್ಯ ಶ್ರೀ ಚನ್ನವೀರಮಹಾಸ್ವಾಮಿಗಳು**<br>ವಿರಕ್ತಮಠ, ನರಗುಂದ | ಗದಗ |
| 4. | **ಡಾ. ಎಂ.ಷಡಕ್ಷರಿಸ್ವಾಮಿ, ಮಾಜಿ ಪ್ರಿನ್ಸಿಪಲ್**<br>ಸೆಂಟ್ರಲ್ ಕಾಲೇಜ್ | ಬೆಂಗಳೂರು |
| 5. | **ಎಸ್.ಬಿ.ಮುದ್ದಪ್ಪ, ಐ.ಎ.ಎಸ್.(ನಿ.)**<br>ಕರ್ನಾಟಕ ಸರ್ಕಾರದ ಮುಖ್ಯಕಾರ್ಯದರ್ಶಿಗಳು<br>ಹಾಗೂ ಮಾಜಿ ಉಪಾಧ್ಯಕ್ಷರು, ಅ.ಭಾ.ವೀ.ಮ. | ಬೆಂಗಳೂರು |

| ಕ್ರಸಂ | ಲಿಂಗೈಕ್ಯರಾದ ಪೂಜ್ಯರು ಶರಣ/ಶರಣೆಯರು | ಸ್ಥಳ |
|---|---|---|
| 6. | **ಹೆಚ್.ಎಸ್.ರೇಣುಕಾಪ್ರಸಾದ್**<br>ಬರಹಗಾರರು ಹಾಗೂ ಉಪಾಧ್ಯಕ್ಷರು, ಬಸವ ಸಮಿತಿ | ಬೆಂಗಳೂರು |
| 7. | **ಬಿ.ಟಿ.ರುದ್ರಮ್ಮ**<br>ವಿಧಾನಪರಿಷತ್ ಮಾಜಿಸದಸ್ಯರು | ಭೀಮಸಮುದ್ರ, ಚಿತ್ರದುರ್ಗ ಜಿಲ್ಲೆ |
| 8. | **ಡಾ.ಸಾ.ಶಿ.ಮರುಳಯ್ಯ**<br>ಸಾಹಿತಿಗಳು | ಬೆಂಗಳೂರು |
| 9. | **ಆರ್. ಸುಭಾಷಿಣಿ**<br>ಉಪಾಧ್ಯಕ್ಷರು, ಅ.ಭಾ.ವೀರಶೈವ ಮಹಾಸಭಾ | ಬೆಂಗಳೂರು |
| 10. | **ಸಂಗಮೇಶ್ ಸಿದ್ರಾಮಪ್ಪ ಶಿರಮಗೊಂಡ**<br>ಪ್ರಧಾನ ಕಾರ್ಯದರ್ಶಿಗಳು, ವಿಜಯಪುರ ಜಿಲ್ಲಾ ಘಟಕ | ವಿಜಯಪುರ |
| 11. | **ಹನುಮಂತಪ್ಪ ಕೊಪ್ಪದ**<br>ವೀರಯೋಧರು | ಧಾರವಾಡ |
| 12. | **ಮಹೇಶ್**<br>ವೀರಯೋಧರು | ಮೈಸೂರು |
| 13. | **ನಾಗೇಶ್**<br>ವೀರಯೋಧರು | ಹಾಸನ |
| 14. | **ಎನ್.ಹರೀಶ್ (ಐ.ಪಿ.ಎಸ್)**<br>ಸಹಾಯಕ ಪೋಲಿಸ್ ಕಮೀಶನರ್, ಚನ್ನೈ | ಚಿಕ್ಕಬಳ್ಳಾಪುರ |
| 15. | **ಎಸ್.ಪಿ.ಮಹದೇವಪ್ಪ**<br>ಮಾಜಿ ಅಧ್ಯಕ್ಷರು, ಕೊಡಗು ಜಿಲ್ಲಾ ಘಟಕ | ವೀರಾಜಪೇಟೆ, ಕೊಡಗು ಜಿಲ್ಲೆ |
| 16. | **ವಿ.ಇ.ಗಣೇಶ್**<br>ಮಹಾಸಭೆಯ ಸದಸ್ಯರು | ಬೆಂಗಳೂರು |
| 17. | **ಅಂಬಿಕಮ್ಮ ಚಿಕ್ಕಸಿದ್ದಪ್ಪ**<br>ಸಮಾಜದ ಮುಖಂಡರು | ಕೋಲಾರ ಜಿಲ್ಲೆ |
| 18. | **ಪದ್ಮಮ್ಮ ಸೋಮಶೇಖರ್**<br>ಸಮಾಜದ ಮುಖಂಡರು | ಕೋಲಾರ ಜಿಲ್ಲೆ |
| 19. | **ಅ.ಪು.ಬಸವರಾಜಪ್ಪ**<br>ಸಮಾಜದ ಮುಖಂಡರು | ಕೋಲಾರ ಜಿಲ್ಲೆ |
| 20. | **ಸಿ.ಶಂಭುಲಿಂಗಪ್ಪ**<br>ಸಮಾಜದ ಮುಖಂಡರು | ಕೋಲಾರ ಜಿಲ್ಲೆ |
| 21. | **ಮಲ್ಲಪ್ಪ**<br>ಸಮಾಜದ ಮುಖಂಡರು | ಕೋಲಾರ ಜಿಲ್ಲೆ |
| 22. | **ಸಿ.ಸಿ.ಪಾಲಾಕ್ಷಪ್ಪ**<br>ಸಮಾಜದ ಮುಖಂಡರು | ಕೋಲಾರ ಜಿಲ್ಲೆ |

| ಕ್ರ.ಸಂ | ಲಿಂಗೈಕ್ಯರಾದ ಪೂಜ್ಯರು ಶರಣ/ಶರಣೆಯರು | ಸ್ಥಳ |
|---|---|---|
| 23. | **ನಾಡಿಗೇರ ಶಿವಲಿಂಗಮೂರ್ತಿ**<br>ಸಮಾಜದ ಮುಖಂಡರು | ಚನ್ನಗಿರಿ, ಜಿಲ್ಲಾ ದಾವಣಗೆರೆ |
| 24. | **ಸರ್ವಮಂಗಳಮ್ಮ**<br>ಸಮಾಜದ ಮುಖಂಡರು | ಚನ್ನಗಿರಿ, ಜಿಲ್ಲಾ ದಾವಣಗೆರೆ |
| 25. | **ಎಂ.ಮಹದೇವ್,** ಮಾಜಿ ಸಚಿವರು<br>ಸಮಾಜದ ಮುಖಂಡರು | ಹೆಮ್ಮರಗಾಲ, ಮೈಸೂರು ಜಿಲ್ಲೆ |
| 26. | **ವೈ.ಪಿ.ಮಹಾದೇವಪ್ಪ**<br>ಸಮಾಜದ ಮುಖಂಡರು | ನಂಜನಗೂಡು, ಮೈಸೂರು ಜಿಲ್ಲೆ |
| 27. | **ಹೆಚ್.ಎಂ.ದೊರೆಸ್ವಾಮಿ**<br>ಸಮಾಜದ ಮುಖಂಡರು | ಹಗಿನವಾಳು, ಮೈಸೂರು ಜಿಲ್ಲೆ |
| 28. | **ಕೆ.ಪಿ.ಶಿವಣ್ಣ**<br>ಸಮಾಜದ ಮುಖಂಡರು | ಕೋಮರನಪುರ,<br>ಚಾಮರಾಜನಗರ ಜಿಲ್ಲೆ |
| 29. | **ಕೆ.ಪಿ.ಮಹದೇವಸ್ವಾಮಿ**<br>ಸಮಾಜದ ಮುಖಂಡರು | ಚಾಮರಾಜನಗರ |
| 30. | **ಪ್ರೇಮಾ ಶಿವಸ್ವಾಮಿ**<br>ಸಮಾಜದ ಮುಖಂಡರು | ಚಾಮರಾಜನಗರ |
| 31. | **ಹೆಚ್.ಎಂ.ಶಾಂತಮಲ್ಲಪ್ಪ**<br>ಸಮಾಜದ ಮುಖಂಡರು | ಚಾಮರಾಜನಗರ |
| 32. | **ಪಟೇಲ್ ಹೆಚ್.ಆರ್.ಬಸವಣ್ಣ,**<br>ಸಮಾಜದ ಮುಖಂಡರು | ಹೊನ್ನೂರು, ಚಾಮರಾಜನಗರ ಜಿಲ್ಲೆ |
| 33. | **ಎಂ.ಎಸ್.ಶಿವರುದ್ರಪ್ಪ**<br>ಸಮಾಜದ ಮುಖಂಡರು | ಸಂತೇಮರಳ್ಳಿ,<br>ಚಾಮರಾಜನಗರ ಜಿಲ್ಲೆ |
| 34. | **ವೀರೇಂದ್ರಕುಮಾರ್**<br>ಸಮಾಜದ ಮುಖಂಡರು | ಕೊಳ್ಳೆಗಾಲ, ಚಾಮರಾಜನಗರ ಜಿಲ್ಲೆ |
| 35. | **ನಾಗರಾಜು**<br>ಸಮಾಜದ ಮುಖಂಡರು | ಮೂಡ್ಲುಪುರ,<br>ಚಾಮರಾಜನಗರ ಜಿಲ್ಲೆ |
| 36. | **ಗೌಡರು ನಾಗರಾಜಪ್ಪ**<br>ಸಮಾಜದ ಮುಖಂಡರು | ಪುಟ್ಟನಪುರ,<br>ಚಾಮರಾಜನಗರ ಜಿಲ್ಲೆ |
| 37. | **ಜಿ.ಜಿ.ದೊಡ್ಡವಾಡ**<br>ಉದ್ದಿಮೆದಾರರು, ದಾನಿಗಳು, ಸಮಾಜದ ಮುಖಂಡರು | ಧಾರವಾಡ |
| 38. | **ವಿರುಪಾಕ್ಷಪ್ಪ ಕೊತಂಬ್ರಿ**<br>ಸಮಾಜದ ಮುಖಂಡರು ಮತ್ತು ದಾನಿಗಳು | ಧಾರವಾಡ |
| 39. | **ಡಾ.ಎಸ್.ಪಿ.ಹಿರೇಮಠ**<br>ಸಮಾಜದ ಮುಖಂಡರು ಮತ್ತು ದಾನಿಗಳು | ಧಾರವಾಡ |

| ಕ್ರ.ಸಂ | ಲಿಂಗೈಕ್ಯರಾದ ಪೂಜ್ಯರು ಶರಣ/ಶರಣೆಯರು | ಸ್ಥಳ |
|---|---|---|
| 40. | **ಲಕ್ಷ್ಮೀಬಾಯಿ ಶಿವಪ್ಪ ಮರಳಪ್ಪ**<br>ಹೋಟೆಲ್ ಉದ್ದಿಮೆದಾರರು | ಧಾರವಾಡ |
| 41. | **ಉಳವಪ್ಪ ಚ.ಬೆಳ್ಳಕ್ಕಿ**<br>ಸಮಾಜದ ಮುಖಂಡರು | ಧಾರವಾಡ |
| 42. | **ಯಲ್ಲಪ್ಪಗೌಡ ಗುರನಗೌಡ ಪಾಟೀಲ**<br>ಸಮಾಜದ ಮುಖಂಡರು | ಧಾರವಾಡ |
| 43. | **ಡಾ.ಹೆಚ್.ಎಂ.ವೃಷಬೇಂದ್ರಸ್ವಾಮಿ**<br>ಸಮಾಜದ ಮುಖಂಡರು | ಧಾರವಾಡ |
| 44. | **ಡಾ.ಸದಾನಂದ ಕನವಳ್ಳಿ**<br>ಮಾಜಿ ನಿರ್ದೇಶಕರು, ಪ್ರಸಾರಂಗ | ಧಾರವಾಡ |
| 45. | **ಬಿ.ಜಿ.ದಾಸ್ತಿಕೊಪ್ಪ,**<br>ಸಮಾಜದ ಮುಖಂಡರು | ಬೆಳಗಾವಿ |
| 46. | **ಬಸನಗೌಡ ಪಾಟೀಲ್**<br>ಸಮಾಜದ ಮುಖಂಡರು | ಬೆಳಗಾವಿ |
| 47. | **ಸಿ.ಎಂ.ನುಚ್ಚಿ**<br>ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು | ವಿಜಯಪುರ |
| 48. | **ಎಸ್.ಸಿ.ಶಿರಮಗೊಂಡ**<br>ಜಿಲ್ಲಾ ಉಪಾಧ್ಯಕ್ಷರು | ವಿಜಯಪುರ |
| 49. | **ಎಚ್.ಆರ್.ಕಲಕೇರಿ**<br>ಉಪಾಧ್ಯಕ್ಷರು, ಮುದ್ದೇಬಿಹಾಳ ತಾ.ಘಟಕ | ಮುದ್ದೇಬಿಹಾಳ |
| 50. | **ದಾದಾಗೌಡ ಪಾಟೀಲ್**<br>ಇಂಡಿ ಹಿರಿಯ ರಾಜಕೀಯ ಧುರೀಣರು | ವಿಜಯಪುರ |
| 51. | **ಬಿ.ಜಿ.ಉಪ್ಪಲದಿನ್ನಿ**<br>ಸದಸ್ಯರು | ವಿಜಯಪುರ |
| 52. | **ನಾಗಪ್ಪ ಚಿಂಚಲಿ**<br>ಸದಸ್ಯರು | ವಿಜಯಪುರ |
| 53. | **ಎಸ್.ಎಸ್.ಕಬ್ಬಿನ**<br>ವಿಶ್ರಾಂತ ಪ್ರಾಚಾರ್ಯರು | ವಿಜಯಪುರ |
| 54. | **ಎಂ.ವೈ.ಬಂದಾಳ**<br>ವಿಶ್ರಾಂತ ಪ್ರಾಚಾರ್ಯರು | ವಿಜಯಪುರ |
| 55. | **ಸಂಗಪ್ಪ ರಾಜ ಮನಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 56. | **ಶಿವಲಿಂಗಪ್ಪ ಶಿವಬಸಪ್ಪ ನಾರಾ**<br>ಸಮಾಜದ ಮುಖಂಡರು | ಬಾಗಲಕೋಟೆ |

| ಕ್ರ.ಸಂ | ಲಿಂಗೈಕ್ಯರಾದ ಪೂಜ್ಯರು ಶರಣ/ಶರಣೆಯರು | ಸ್ಥಳ |
|---|---|---|
| 57. | **ಫಕೀರಪ್ಪ ಡಿ.ಮೇಟಿ**<br>ಸಮಾಜದ ಮುಖಂಡರು | ಸೀಮೀಕೇರಿ |
| 58. | **ಶ್ರೀಶೈಲ ಪಟ್ಟಣಶೆಟ್ಟಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 59. | **ಗುರುಬಸಯ್ಯ ರಾಚಯ್ಯ ಚವಡಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 60. | **ಶಿವಬಸಪ್ಪ ಬಸಪ್ಪ ನಾಗರಾಳ**<br>ಸಮಾಜದ ಮುಖಂಡರು | ಬಾಗಲಕೋಟೆ |
| 61. | **ಸುರೇಶ ಮುರಿಗೆಪ್ಪ ಅಂಗಡಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 62. | **ಶ್ರೀಶೈಲಪ್ಪ ಗುರುಬಸಪ್ಪ ಜಂಬಗಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 63. | **ದುಂಡಪ್ಪ ನಿಂಬಣ್ಣ ದೇವಣಗಾಂವಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 64. | **ವೀರಭದ್ರಯ್ಯ ವೀರಯ್ಯ ಕಂತಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 65. | **ಸಿದ್ಲಿಂಗಪ್ಪ ಈರಪ್ಪ ಏಳೆಮ್ಮಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 66. | **ಸದಾನಂದ ಮುದ್ದಪ್ಪ ರುದ್ರಾಕ್ಷಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 67. | **ಬಸಪ್ಪ ರಾಮಪ್ಪ ಗಾಣಿಗೇರ**<br>ಸಮಾಜದ ಮುಖಂಡರು | ಬಾಗಲಕೋಟೆ |
| 68. | **ಸೋಮಣ್ಣ ಪರಪ್ಪ ಶೆಟ್ಟರ**<br>ಸಮಾಜದ ಮುಖಂಡರು | ಬಾಗಲಕೋಟೆ |
| 69. | **ವಿಶ್ವನಾಥ ವಿ.ಮೊರಬದ**<br>ಸಮಾಜದ ಮುಖಂಡರು | ಬಾಗಲಕೋಟೆ |
| 70. | **ಈರಪ್ಪ ಗುರಪ್ಪ ಮಾಗಾಯಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 71. | **ಈಶ್ವರಯ್ಯ ಈರಯ್ಯ ಶಿಕ್ಕೇರಿಮಠ**<br>ಸಮಾಜದ ಮುಖಂಡರು | ಬಾಗಲಕೋಟೆ |
| 72. | **ಮುರಿಗೆಪ್ಪ ಗುರಲಿಂಗಪ್ಪ ಶೆಲ್ಲಿಕೇರಿ**<br>ಸಮಾಜದ ಮುಖಂಡರು | ಗದ್ದನಕೇರಿ |
| | | |

| ಕ್ರ.ಸಂ | ಲಿಂಗೈಕ್ಯರಾದ ಪೂಜ್ಯರು ಶರಣ/ಶರಣೆಯರು | ಸ್ಥಳ |
|---|---|---|
| 73. | **ಶಿವಪ್ಪ ಮೇಲಪ್ಪ ಜೋಳದ**<br>ಸಮಾಜದ ಮುಖಂಡರು | ಬಾಗಲಕೋಟೆ |
| 74. | **ಚನ್ನವೀರ ನಂದೆಣ್ಣವರ**<br>ಸಮಾಜದ ಮುಖಂಡರು | ಬಾಗಲಕೋಟೆ |
| 75. | **ಪ್ರೇಮಲತಾ ರವೀಂದ್ರ ಹತ್ತಿಗುಡ್ಡ**<br>ಸಮಾಜದ ಮುಖಂಡರು | ಬಾಗಲಕೋಟೆ |
| 76. | **ಬಸವಂತಪ್ಪ ಕಾಶಪ್ಪ ನಾಲತವಾಡ**<br>ಸಮಾಜದ ಮುಖಂಡರು | ಬಾಗಲಕೋಟೆ |
| 77. | **ಬಸಲಿಂಗಮ್ಮ ಚಂದ್ರಶೇಖರಯ್ಯ ಚರಂತಿಮಠ**<br>ಸಮಾಜದ ಮುಖಂಡರು | ಬಾಗಲಕೋಟೆ |
| 78. | **ವೀರೇಶ ಮುರಿಗೆಪ್ಪ ನಾವಲಗಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 79. | **ಶಿದ್ಲಿಂಗಪ್ಪ ಬಸಪ್ಪ ಬಿಜಾಪೂರ**<br>ಸಮಾಜದ ಮುಖಂಡರು | ಬಾಗಲಕೋಟೆ |
| 80. | **ರಾಜಶೇಖರ ಬಸವರಾಜ ಪಟ್ಟಣಶೆಟ್ಟಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 81. | **ಮಲ್ಲಪ್ಪ ಶಿದ್ದಪ್ಪ ಮರೆಣ್ಣಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 82. | **ಶ್ರೀಶೈಲಪ್ಪ ಶಂಕ್ರಪ್ಪ ಅಂಗಡಿ**<br>ಸಮಾಜದ ಮುಖಂಡರು | ಗದ್ದನಕೇರಿ |
| 83 | **ಬಸವರಾಜ ಕಡಿಯಪ್ಪ ಕಂಠಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 84. | **Rajan V.Haripad**<br>Member | Kerala State |
| 85. | **ಡಾ. ಎಸ್.ಬಿ. ಯಲಬುರ್ಗಿಯವರು**<br>ಅಧ್ಯಕ್ಷರು, ಮಂಗಳೂರು ಜಿಲ್ಲಾ ಘಟಕ | ಮಂಗಳೂರು |
| 86. | **ವೈ.ಸಿದ್ಧಲಿಂಗಸ್ವಾಮಿ**<br>ಕಾರ್ಯನಿರ್ವಾಹಕ ಸಮಿತಿ ಸದಸ್ಯರು, ಮಂಡ್ಯ | ಮಂಡ್ಯ |
| 87. | **ಮಲ್ಲಾರಾಧ್ಯ ಪ್ರಸನ್ನ**<br>ಮಾಜಿ ಮಂಡ್ಯ ಜಿಲ್ಲಾಧ್ಯಕ್ಷರು | ಮಂಡ್ಯ |
| 88. | **ಉಷಾ ಚಿದಾನಂದ್**<br>ಸಹಾಯಕರು, ಅ.ಭಾ.ವೀರಶೈವ ಮಹಾಸಭಾ(ರಿ.) | ಬೆಂಗಳೂರು |
| 89. | **ಲಲಿತಾ ಬಾಲಚಂದ್ರಮೂರ್ತಿ**<br>ಮಾಜಿ ಉಪಾಧ್ಯಕ್ಷರು, ಜಿಲ್ಲಾ ಪಂಚಾಯ್ತಿ | ನಂಜನಗೂಡು ಮೈಸೂರು ಜಿಲ್ಲೆ |

| ಕ್ರ.ಸಂ | ಲಿಂಗೈಕ್ಯರಾದ ಪೂಜ್ಯರು ಶರಣ/ಶರಣೆಯರು | ಸ್ಥಳ |
|---|---|---|
| 90. | **ಸಿದ್ದಪ್ಪ ಚೌಶೆಟ್ಟಿಮಾಜಿ**<br>ಅಧ್ಯಕ್ಷರು, ಹಾವೇರಿ ಜಿಲ್ಲಾ ಘಟಕ, ಹಾವೇರಿ | ಹಾವೇರಿ |
| 91. | **ವಿಶ್ವನಾಥ ಎಸ್. ಜಂಬಗಿ**<br>ಉಪಾಧ್ಯಕ್ಷರು, ಹಾವೇರಿ ಜಿಲ್ಲಾ ಘಟಕ | ರಾಣೇಬೆನ್ನೂರು ಹಾವೇರಿ |
| 92. | **ಚಂದ್ರಪ್ಪ ನಾಗಪ್ಪ ಮುರಾರಿ**<br>ಸದಸ್ಯರು, ಹಾವೇರಿ ಜಿಲ್ಲಾ ಘಟಕ, ಹಾವೇರಿ | ಹಾವೇರಿ |
| 93. | **ವಿರುಪಾಕ್ಷಪ್ಪ ದೊಡ್ಡವೀರಪ್ಪ ಮಾಳಿ**<br>ಸದಸ್ಯರು, ಹಾವೇರಿ ಜಿಲ್ಲಾ ಘಟಕ, ಹಾವೇರಿ | ಹಾವೇರಿ |
| 94. | **ಕೊಟ್ರಪ್ಪ ಕರಿಯಪ್ಪ ಕೊಪ್ಪದ**<br>ಸದಸ್ಯರು, ಹಾವೇರಿ ಜಿಲ್ಲಾ ಘಟಕ, ಹಾವೇರಿ | ಹಾವೇರಿ |
| 95. | **ಅಶೋಕ ವೀರಭದ್ರಪ್ಪ ಕಾಶೆಟ್ಟಿ**<br>ಸದಸ್ಯರು, ಹಾವೇರಿ ಜಿಲ್ಲಾ ಘಟಕ, ಹಾವೇರಿ | ಹಾವೇರಿ |
| 96. | **ಮಂಜುನಾಥ ಹೊಳಬಸಪ್ಪ ಹುರಗಿ**<br>ಸದಸ್ಯರು, ಹಾವೇರಿ ಜಿಲ್ಲಾ ಘಟಕ, ಹಾವೇರಿ | ಹಾವೇರಿ |
| 97. | **ಪ್ರೊ.ಎಸ್.ಎಂ.ಸಾಬೋಜಿ**<br>ಸದಸ್ಯರು ಮತ್ತು ಸಮಾಜದ ಗಣ್ಯ ವ್ಯಕ್ತಿಗಳು | ರಾಣೇಬೆನ್ನೂರು, ಹಾವೇರಿ |
| 98. | **ಪಿ.ಎನ್.ದೇವರಾಜ್**<br>ಸದಸ್ಯರು ಹಾಗೂ ಸಮಾಜದ ಗಣ್ಯರು | ಬೆಂಗಳೂರು |
| 99. | P.V.Sivan Master<br>Member | ಕೇರಳ |
| 100. | **ವೇದಮೂರ್ತಿ**<br>ಸದಸ್ಯರು | ಮಂಡ್ಯ |
| 101. | **ಬಿ.ಮರಿಸ್ವಾಮಿ**<br>ಸದಸ್ಯರು | ಮಂಡ್ಯ |
| 102. | **ಮರಿಸಿದ್ದಪ್ಪ**<br>ಸದಸ್ಯರು | ಮಂಡ್ಯ |
| 103 | **ಹೆಚ್.ಆರ್.ಮೃತ್ಯುಂಜಯಸಿ.ಇ. (ನಿ.)**<br>ಬಿ.ಡಬ್ಲ್ಯೂಎಸ್.ಎಸ್.ಬಿ | ಬೆಂಗಳೂರು |
| 104 | ಹೆಚ್.ಹುಚ್ಚವೀರಯ್ಯ<br>ಆಡಳಿತಾಧಿಕಾರಿಗಳು, ಸಿದ್ಧಗಂಗಾಮಠ | ಹೈದರಾಬಾದ್ |
| 105 | Deepavali Baburao<br>General Secretary, Telangana State Unit | Hyderabad |
| 106 | Smt Chakote<br>Mother of Vishwanath Baburao Chakote | Sollapur<br>Maharashtra Sate |

ಇವರುಗಳು ಲಿಂಗೈಕ್ಯರಾಗಿರುತ್ತಾರೆ. ಇವರುಗಳ ನಿಧನದಿಂದ ಅವರ ಕುಟುಂಬವರ್ಗಕ್ಕೆ ಹಾಗೂ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಇವರ ಅಗಲುವಿಕೆಯನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಹಾಗೂ ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸಿ, 2 ನಿಮಿಷ ಮೌನವಾಚರಿಸಿ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

**ವಿಷಯ ನಂ 4 :– ಸಭೆಯ ತಿಳುವಳಿಕೆ ಪತ್ರ ಓದಿ ದಾಖಲಿಸುವುದು.**

ಮಹಾಪ್ರಧಾನ ಕಾರ್ಯದರ್ಶಿಗಳ ಅನುಪಸ್ಥಿತಿಯಲ್ಲಿ, ಕೋಶಾಧ್ಯಕ್ಷರಾದ **ಶ್ರೀಮತಿ ಸುನಂದ ಗಿರೀಶ್** ಇವರು ಸಭೆಯ ತಿಳುವಳಿಕೆ ಪತ್ರವನ್ನು ಓದಿದ ನಂತರ ದಾಖಲಿಸಲು ಅನುಮತಿ ಕೋರಿದರು.

**ನಿರ್ಣಯ:–**

**ಸಭೆಯ ತಿಳುವಳಿಕೆ ಪತ್ರ ಓದಿ ಯಾವುದೇ ಬದಲಾವಣೆ ಇಲ್ಲದೆ ದಾಖಲಿಸಲಾಯಿತು.**

**ಸೂಚಕರು :– ಶ್ರೀ ಎಂ.ಎಸ್.ಕೋರಿಶೆಟ್ಟರ್, ಅಧ್ಯಕ್ಷರು, ಹಾವೇರಿ ಜಿಲ್ಲಾ ಘಟಕ**

**ಅನುಮೋದಕರು :– ಶ್ರೀ ಹೆಚ್.ವಿ.ಬಸವರಾಜು, ಅಧ್ಯಕ್ಷರು, ಮೈಸೂರು ಜಿಲ್ಲಾ ಘಟಕ**

**ವಿಷಯ ನಂ 5 :– ದಿನಾಂಕ: 10–1–2016ರಂದು ನಡೆದ ಹಿಂದಿನ ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು.**

ಕೋಶಾಧ್ಯಕ್ಷರಾದ **ಶ್ರೀಮತಿ ಸುನಂದ ಗಿರೀಶ್** ಇವರು ಈ ವಿಷಯವನ್ನು ಮಂಡಿಸಿ, ತಮಗೆ ಕೊಟ್ಟಿರುವ 42ನೇ ವಾರ್ಷಿಕ ಸಭೆಯ ವರದಿಯ ಪುಸ್ತಕದ ಪುಟ ನಂ. 3 ರಿಂದ 44ರವರೆಗೆ ದಿನಾಂಕ: 10–12–2016ರಂದು ನಡೆದ ಹಿಂದಿನ ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಗಳನ್ನು ಮುದ್ರಿಸಿದೆ. ಇದರಲ್ಲಿ ಏನಾದರೂ ಸಲಹೆ–ಸೂಚನೆಗಳಿದ್ದರೆ ತಿಳಿಸಬಹುದು. ಏನೂ ಸಲಹೆ–ಸೂಚನೆಗಳು ಇಲ್ಲದಿದ್ದಲ್ಲಿ ನಡವಳಿಗಳನ್ನು ಮಾನ್ಯ ಸದಸ್ಯರು ದೃಢೀಕರಿಸಬೇಕೆಂದು ಕೋರಿದರು.

**ಶ್ರೀ ಎನ್.ಕೇಶವಕುಮಾರ್, ಬೆಂಗಳೂರು ಇವರು ಮಾತನಾಡಿ:–** ಮಾನ್ಯ ಅಧ್ಯಕ್ಷರೇ, ಕಳೆದ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಎಂಬೆಸಿ ಗ್ರೂಪ್‌ನ **ಶ್ರೀ ಜಿತು ವೀರ್ವಾನಿಯವರಿಂದ** ಮಹಾಸಭೆಗೆ 2 ಎಕರೆ ಜಮೀನನ್ನು ವಿದ್ಯಾರ್ಥಿ/ ವಿದ್ಯಾರ್ಥಿನಿಯರ ಉಚಿತ ವಸತಿ ನಿಲಯ ನಿರ್ಮಾಣಕ್ಕೆ ದಾನ ಪಡೆಯಲಾಗಿತ್ತು. ಅದನ್ನು ನೋಂದಣಿ ಮಾಡಿಸಿಕೊಳ್ಳಲಾಗಿದೆಯೇ. ಈ ಬಗ್ಗೆ ಸಭೆಗೆ ತಿಳಿಸಬೇಕು. ಹಿಂದೆ ಡಾ. ಭೀಮಣ್ಣ ಖಂಡ್ರೆಯವರು ಅಧ್ಯಕ್ಷರಾಗಿದ್ದಾಗ ಮೇಲಿನ ಉದ್ದೇಶಕ್ಕಾಗಿಯೇ ಹಣವನ್ನು ಸಂಗ್ರಹಿಸಲಾಗಿತ್ತು. ಇದಕ್ಕೆ ಒಂದು ಸಮಿತಿ ರಚನೆ ಮಾಡಿ ಬೇಗ ಅಲ್ಲಿ ಗುದ್ದಲಿಪೂಜೆ ಮಾಡಿ, ನಿಮ್ಮ ಅವಧಿಯಲ್ಲಿಯೇ ಕಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಬೇಕು ಎಂಬುದು ನಮ್ಮ ಕಳಕಳಿಯ ಮನವಿ.

ಹಾಗೆಯೇ ಮಹಾಸಭೆಯಿಂದ ಪ್ರತಿಭಾವಂತ ಮಕ್ಕಳಿಗೆ **'ಪ್ರತಿಭಾ ಪುರಸ್ಕಾರ'** ಮಾಡುತ್ತಿದ್ದೀರಾ. ನಾನು ದಾವಣಗೆರೆಯಲ್ಲಿ ನಡೆದ **'ಪ್ರತಿಭಾ ಪುರಸ್ಕಾರ'** ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಸುಮಾರು 250 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಜೊತೆಯಲ್ಲಿ ಕರಡಿಗೆಯನ್ನು ಕೊಡುತ್ತಿರುವುದು ಒಳ್ಳೆಯ ಕೆಲಸ. ಪ್ರತಿಭಾ ಪುರಸ್ಕಾರಕ್ಕೆಂದೇ ರೂ. 41 ಲಕ್ಷ ಖರ್ಚು

ಮಾಡಿದ್ದೀರಾ. ಈ ಉದ್ದೇಶಕ್ಕೆ ನೀವು ಈ ಹಣವನ್ನು ಮಹಾಸಭೆಯ ಫಂಡ್‌ನಿಂದ ಕೊಡುವುದು ಸರಿಯಲ್ಲ. ಸುಮಾರು 39ಲಕ್ಷ ಹಣವನ್ನು ಫಿಕ್ಸೆಡ್ ಡಿಪಾಸಿಟ್‌ನಿಂದ ತೆಗೆದುಕೊಂಡಿದ್ದೀರಾ. ದಯಮಾಡಿ ದಾನಿಗಳನ್ನು ಹಿಡಿದು ಹಣವನ್ನು ಸಂಗ್ರಹಿಸಿ ಕೊಡುವುದು ಒಳ್ಳೆಯದು. ಯಾರನ್ನಾದರೂ ದಾನ ಕೇಳಿದ್ದೀರಾ? ನಮ್ಮಲ್ಲಿ ತುಂಬಾ ದಾನಿಗಳಿದ್ದಾರೆ. ದಾವಣಗೆರೆಯಲ್ಲಿ ಸಾಕಷ್ಟು ಜನ ದಾನಿಗಳಿದ್ದಾರೆ ಅವರನ್ನು ಕೇಳಿ. ಹಾಗೆಯೇ ನಾನು ಕೂಡಾ ಒಂದು ಕರಡಿಗೆಗೆ ಹಣವನ್ನು ಕೊಡುತ್ತೇನೆ.

ವರದಿಯ ಪುಟ ಸಂಖ್ಯೆ 6ರಲ್ಲಿ 2 ನಿವೇಶನ ಪಡೆಯಲು ಬಿ.ಡಿ.ಎ.ಗೆ ಅರ್ಜಿ ಸಲ್ಲಿಸಿ ಹಣವನ್ನು ಕಟ್ಟಲಾಗಿತ್ತು. ಆದರೆ ನಿವೇಶನ ಮಂಜೂರಾಗದೇ ಹಣವನ್ನು ವಾಪಾಸ್ ತೆಗೆದುಕೊಳ್ಳಲಾಗಿದೆ. ಸರ್ಕಾರದಲ್ಲಿ ವೀರಶೈವ–ಲಿಂಗಾಯತರಿಗೆ ಯಾವುದೇ ಪ್ರಾಮುಖ್ಯತೆ ನೀಡುತ್ತಿಲ್ಲ. ನಮಗೆ ಅನ್ಯಾಯವಾಗಿದೆ. ಈ ಬಗ್ಗೆ ಯಾರನ್ನ ಕೇಳುವುದು. ಈ ವಿಷಯವನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಈ ಬಗ್ಗೆ ಪತ್ರ ಬರೆದು ಮಹಾಸಭೆಗೆ ನಿವೇಶನವನ್ನು ಮಂಜೂರು ಮಾಡಬೇಕೆಂದು ಒತ್ತಾಯ ಮಾಡಬೇಕು. ಅದಕ್ಕೆ ಸರ್ಕಾರ ಮನ್ನಣೆ ಕೊಡದಿದ್ದರೇ ನಿಮ್ಮ ಜೊತೆ ಲಕ್ಷಾಂತರ ಜನರಿದ್ದೇವೆ. ತಾವು ಮುಂದಿನ ಸರ್ವಸದಸ್ಯರ ಸಭೆಯನ್ನು ದಾವಣಗೆರೆಯಲ್ಲಿ ಮಾಡಿ ಲಕ್ಷಾಂತರ ಜನರನ್ನು ಸೇರಿಸಿ ಮಹಾಸಭೆಯ ಶಕ್ತಿ ಪ್ರದರ್ಶನ ಮಾಡೋಣ ಎಂದರು.

**ಮಹಾಸಭೆಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರು ಮಾತನಾಡಿ,** 2 ಎಕರೆ ಜಮೀನನ್ನು ಖರೀದಿ ಮಾಡಿರುವುದಲ್ಲ. ಅದನ್ನು ದಾನ ಪಡೆಯಲಾಗಿದೆ. ಜಮೀನು ದೇವನಹಳ್ಳಿ ಏರ್‌ಪೋರ್ಟ್ ರಸ್ತೆಯಲ್ಲಿದೆ. ಹಾಗೂ ಮಹಾಸಭೆಯ ಹೆಸರಿನಲ್ಲಿ ನೋಂದಣಿ ಕೂಡಾ ಮಾಡಿಸಿಕೊಳ್ಳಲಾಗಿದೆ. ಇದರ ಎಲ್ಲಾ ಕೆಲಸಗಳನ್ನು ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ಜಿ.ಗುರುಬಸಪ್ಪನವರು ಮಾಡಿರುತ್ತಾರೆ. ಖಾತೆ ಬದಲಾವಣೆಗೆ ಅರ್ಜಿ ಕೊಟ್ಟಿದ್ದಾರೆ. ಜೊತೆಯಲ್ಲಿ ಲ್ಯಾಂಡ್‌ಮಾರ್ಕ್ ಮಾಡಲು ಈಗಾಗಲೇ ಹೇಳಲಾಗಿದೆ. ಪ್ಲಾನ್ ಮಾಡಿಸಬೇಕಾಗಿದೆ. ಇದೆಲ್ಲಾ ಕೆಲಸಗಳು ಆದ ಮೇಲೆ ಕಟ್ಟಡದ ಕೆಲಸ ಪ್ರಾರಂಭ ಮಾಡಲಾಗುತ್ತದೆ. ಹಿಂದಿನ ಸರ್ವ ಸದಸ್ಯರ ಸಭೆಯಲ್ಲಿ ನಿವೇಶನವನ್ನು ದಾನ ನೀಡಿದ ದಾನಿಗಳಿಗೆ ಸನ್ಮಾನವನ್ನು ಮಾಡಲಾಗಿದೆ. ಅಂದು ಅನೇಕ ಗಣ್ಯರು ಒಂದೊಂದು ಕೊಠಡಿ ಕಟ್ಟಲು ದೇಣಿಗೆ ನೀಡುವುದಾಗಿ ವಾಗ್ದಾನ ಮಾಡಿದ್ದಾರೆ. ಅದಕ್ಕಾಗಿ ಇನ್ನೊಂದು ಸಭೆ ಕರೆದು ಎಲ್ಲಾ ಗಣ್ಯರನ್ನು ಸಂಪರ್ಕಿಸಿ ಹಣವನ್ನು ಸಂಗ್ರಹಿಸಬೇಕು. ಒಂದು ಕೊಠಡಿಗೆ ಎಷ್ಟು ಮೊತ್ತವಾಗುತ್ತದೆ ಎಂದು ಎಸ್ಟಿಮೇಟ್ ಮಾಡಿಸಬೇಕಾಗಿದೆ. ಇದೆಲ್ಲಾ ಕೆಲಸವನ್ನು ಕ್ರಮವಾಗಿ ಮಾಡಬೇಕಾಗಿದೆ ಎಂದರು.

ಹಾಗೆಯೇ ನಾವು ನಿವೇಶನಕ್ಕಾಗಿ ಬಿ.ಡಿ.ಎ.ಗೆ ಸೈಟಿಗೆ ಅರ್ಜಿ ಸಲ್ಲಿಸಿದ್ದೆವು. ಈಗಿನ ರೆವಿನ್ಯೂ ಮಿನಿಸ್ಟರ್ ಆದ ಶ್ರೀ ಕಾಗೋಡು ತಿಮ್ಮಪ್ಪನವರು ಏನು ಹೇಳುತ್ತಾರೆ ಎಂದರೆ ಮೊದಲು ತಹಸೀಲ್ದಾರ್‌ರವರಿಗೆ ಮತ್ತು ಡಿ.ಸಿ.ಯವರೆಗೆ ಪತ್ರ ಕೊಡಬೇಕು. ಅದರ ಒಂದು ಪ್ರತಿ ನಮಗೆ ಕಳುಹಿಸಿಕೊಡಿ. ಅವರು ಜಾಗವನ್ನು ಪರಿಶೀಲಿಸಿದ ನಂತರ ನಾವು ಅದನ್ನು ತರಿಸಿಕೊಳ್ಳುತ್ತೇವೆ ಎಂದಿದ್ದಾರೆ. ನಾವು ಯಾವುದೇ ನಿರ್ದಿಷ್ಟವಾಗಿ ಜಾಗ ಪರಿಶೀಲನೆ ಮಾಡಿರುವುದಿಲ್ಲ. ನಾವು ಯಾವುದಾದರೂ ಜಾಗ ನೋಡಿ ಅದನ್ನು ಚೆಕ್ ಮಾಡಲು ಒಬ್ಬರು ಅಥವಾ ಇಬ್ಬರನ್ನು ಕಳುಹಿಸಬೇಕಾಗಿದೆ ಈ ಬಗ್ಗೆ ಮುಂದಿನ ದಿನಗಳಲ್ಲಿ ಪ್ರಯತ್ನ ಮಾಡಲಾಗುತ್ತದೆ ಎಂದರು.

**ನಿರ್ಣಯ:–**

**ದಿನಾಂಕ 10–1–2016ರಂದು ನಡೆದ 2014–15ನೇ ಸಾಲಿನ 41ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಅಂಗೀಕರಿಸಲಾಗಿದೆಯೆಂದು ತೀರ್ಮಾನಿಸಲಾಯಿತು.**

**ಸೂಚಕರು :– ಶ್ರೀ ಎನ್.ಕೇಶವಕುಮಾರ್, ಅಧ್ಯಕ್ಷರು, ಬಿ.ಬಿ.ಎಂ.ಪಿ.**

**ಅನುಮೋದಕರು :– ಶ್ರೀ ಎಂ.ಎಸ್.ನಟರಾಜ್, ಅಧ್ಯಕ್ಷರು, ಬೆಂಗಳೂರು ಜಿಲ್ಲಾ ಘಟಕ**

**ವಿಷಯ ನಂ 6 :– 2015–16ನೇ ಸಾಲಿನ 'ವಾರ್ಷಿಕ ವರದಿ' ಮಂಡನೆ–ಅಂಗೀಕಾರ.**

**ಈ ವಿಷಯವನ್ನು ಮಹಾಸಭೆಯ ಕೋಶಾಧ್ಯಕ್ಷರಾದ ಶ್ರೀಮತಿ ಸುನಂದ ಗಿರೀಶ್ ಇವರು ಮಂಡಿಸಿ,** ತಮಗೆ ಕೊಟ್ಟಿರುವ ವಾರ್ಷಿಕ ವರದಿಯ ಪುಸ್ತಕದ ಪುಟ ನಂ 45 ರಿಂದ 64 ರವರೆಗೆ 2015–16ನೇ ಸಾಲಿನ 42ನೇ ವಾರ್ಷಿಕ ವರದಿಯನ್ನು ಮುದ್ರಿಸಲಾಗಿದೆ. ಈ ಸಾಲಿನಲ್ಲಿ ನಡೆದ ಕಾರ್ಯಚಟುವಟಿಕೆಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಲಾಗಿದೆ. ಮಾನ್ಯ ಸದಸ್ಯರು ಇದಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸಲು ಕೋರಿದರು.

ನಂತರ ಎಲ್ಲಾ ಸದಸ್ಯರು 2015–16ನೇ ಸಾಲಿನ ವಾರ್ಷಿಕ ವರದಿಗೆ ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

**ನಿರ್ಣಯ:–**

**2015–16ನೇ ಸಾಲಿನ 42ನೇ ವಾರ್ಷಿಕ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆಯೆಂದು ತೀರ್ಮಾನಿಸಲಾಯಿತು.**

**ಸೂಚಕರು :– ಶ್ರೀಮತಿ ಗೀತಾ ಜಯಂತ್, ಅಧ್ಯಕ್ಷರು ರಾಷ್ಟ್ರೀಯ ಮಹಿಳಾ ವಿಭಾಗ**

**ಅನುಮೋದಕರು :– ಶ್ರೀ ಗುರುರಾಜ್ ಹುಣಸಿಮರದ, ಉಪಾಧ್ಯಕ್ಷರು, ಅ.ಭಾ.ವೀ.ಮಹಾಸಭಾ**

**ವಿಷಯ ನಂ 7 :– 2015–16ನೇ ಸಾಲಿನ ಲೆಕ್ಕಪರಿಶೋಧಕರ ವರದಿ ಮಂಡನೆ ಮತ್ತು ಅಂಗೀಕಾರ.**

**ಈ ವಿಷಯವನ್ನು ಮಹಾಸಭೆಯ ಕೋಶಾಧ್ಯಕ್ಷರಾದ ಶ್ರೀಮತಿ ಸುನಂದ ಗಿರೀಶ್ ಇವರು ಮಂಡಿಸಿ,** ತಮಗೆ ಕೊಟ್ಟಿರುವ ವಾರ್ಷಿಕ ವರದಿಯ ಪುಸ್ತಕದ ಪುಟ ನಂ. 67 ರಿಂದ 78 ರವರೆಗೆ ಲೆಕ್ಕ ಪರಿಶೋಧಿಸಿದ 2015–16ನೇ ಸಾಲಿನ ಲೆಕ್ಕ ಪತ್ರಗಳನ್ನು ಹಾಗೂ ಲೆಕ್ಕ ಪರಿಶೋಧಕರ ವರದಿಯನ್ನು ಮುದ್ರಿಸಲಾಗಿದ್ದು, ಮಾನ್ಯ ಸದಸ್ಯರು ಇವುಗಳನ್ನು ಪರಿಶೀಲಿಸಿ, ಏನಾದರೂ ವಿವರಣೆ ಬೇಕಾಗಿದ್ದರೆ ಕೇಳಿ ಒಪ್ಪಿಗೆಯನ್ನು ಕೊಡಬೇಕೆಂದು ಕೋರಿದರು.

**ಶ್ರೀ ವಿಶ್ವೇಶ್ವರಯ್ಯ,** ಹೊಸನಗರ, ಶಿವಮೊಗ್ಗ ಜಿಲ್ಲೆ ಇವರು ಮಾತನಾಡಿ, ಲೆಕ್ಕಪರಿಶೋಧಕರ ವರದಿಯನ್ನು ಕನ್ನಡದಲ್ಲಿ ಮುದ್ರಿಸಬೇಕು ಎಂದು ಮನವಿ ಮಾಡಿದರು.

ಕೋಶಾಧ್ಯಕ್ಷರಾದ **ಶ್ರೀಮತಿ ಸುನಂದ ಗಿರೀಶ್‌ರವರು** ಮಾತನಾಡಿ, ಇದು ಅಖಿಲ ಭಾರತ ಮಟ್ಟದ ಸಂಸ್ಥೆಯಾಗಿರುವುದರಿಂದ ಎಲ್ಲರಿಗೂ ಅನುಕೂಲವಾಗುವಂತೆ ಇಂಗ್ಲೀಷ್‌ನಲ್ಲೇ ಮುದ್ರಿಸಲಾಗುತ್ತಿದೆ ಎಂದರು.

ನಂತರ 2015–16ನೇ ಸಾಲಿನ ಲೆಕ್ಕಪರಿಶೋಧಕರ ವರದಿಗೆ ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

**ನಿರ್ಣಯ:–**

**ಲೆಕ್ಕಪರಿಶೋಧಕರು ಲೆಕ್ಕಪರಿಶೋಧಿಸಿದ 2015–16ನೇ ಸಾಲಿನ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತೆಂದು ತೀರ್ಮಾನಿಸಲಾಯಿತು.**

**ಸೂಚಕರು :– ಶ್ರೀ ವಿಶ್ವೇಶ್ವರಯ್ಯ,** ಹೊಸನಗರ, ಶಿವಮೊಗ್ಗ ಜಿಲ್ಲೆ

**ಅನುಮೋದಕರು :– ಶ್ರೀಮತಿ ಸುವರ್ಣ ಚನ್ನಣ್ಣ, ಕಾರ್ಯದರ್ಶಿ, ಅ.ಭಾ.ವೀ.ಮಹಾಸಭಾ**

**ವಿಷಯ ನಂ 8 :– 2016–17ನೇ ಸಾಲಿನ ಮಹಾಸಭೆಯ ವಾರ್ಷಿಕ ಆದಾಯ–ವೆಚ್ಚಗಳ ಅಂದಾಜುಪಟ್ಟಿಯ ಮಂಡನೆ ಹಾಗೂ ಅಂಗೀಕಾರ.**

**ಈ ವಿಷಯವನ್ನು ಮಹಾಸಭೆಯ ಕೋಶಾಧ್ಯಕ್ಷರಾದ ಶ್ರೀಮತಿ ಸುನಂದ ಗಿರೀಶ್ ಇವರು ಮಂಡಿಸಿ,** ವಾರ್ಷಿಕ ವರದಿಯ ಪುಸ್ತಕದ ಪುಟ ಸಂಖ್ಯೆ 65 ಮತ್ತು 66ರಲ್ಲಿ ಮುದ್ರಿಸಿರುವ 2016–17ನೇ ಸಾಲಿನ ಮಹಾಸಭೆಯ ವಾರ್ಷಿಕ ಆದಾಯ–ವೆಚ್ಚಗಳ ಅಂದಾಜುಪಟ್ಟಿಯನ್ನು ಪರಿಶೀಲಿಸಿ ಮಾನ್ಯ ಸದಸ್ಯರುಗಳು ಒಪ್ಪಿಗೆ ಕೊಡಲು ಕೋರಿದರು.

ನಂತರ 2016–17ನೇ ಸಾಲಿನ ಮಹಾಸಭೆಯ ವಾರ್ಷಿಕ ಆದಾಯ–ವೆಚ್ಚಗಳ ಅಂದಾಜುಪಟ್ಟಿಗೆ ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

**ನಿರ್ಣಯ:–**

**2016–17ನೇ ಸಾಲಿನ ಮಹಾಸಭೆಯ ವಾರ್ಷಿಕ ಆದಾಯ–ವೆಚ್ಚಗಳ ಅಂದಾಜು ಪಟ್ಟಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಕೊಟ್ಟಿದೆ ಎಂದು ತೀರ್ಮಾನಿಸಲಾಯಿತು.**

**ಸೂಚಕರು :– ಶ್ರೀ ಕಲ್ಯಾಣರಾವ್ ಮುಚಲಾಂಬೆ, ಕಾರ್ಯದರ್ಶಿ, ಅ.ಭಾ.ವೀ.ಮ.**

**ಅನುಮೋದಕರು :– ಶ್ರೀ ಮಲ್ಹಾರಿಗೌಡ ಎಸ್.ಪಾಟೀಲ್, ಉಪಾಧ್ಯಕ್ಷರು, ಅ.ಭಾ.ವೀ.ಮ.**

**ವಿಷಯ ನಂ. 9 :– 2016–17ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ಗೊತ್ತುಪಡಿಸುವುದು.**

**ಈ ವಿಷಯವನ್ನು ಮಹಾಸಭೆಯ ಕೋಶಾಧ್ಯಕ್ಷರಾದ ಶ್ರೀಮತಿ ಸುನಂದ ಗಿರೀಶ್ ಇವರು ಮಂಡಿಸಿ,** 1974ರಿಂದ ಇಲ್ಲಿಯವರೆಗೂ ಮೆ॥ ಬಿ.ಆರ್.ವಿ.ಗೌಡ ಅಂಡ್ ಕಂಪನಿ, ಬೆಂಗಳೂರು ಇವರು ಮಹಾಸಭೆಯ ಲೆಕ್ಕ–ಪರಿಶೋಧಕರಾಗಿ ಮಹಾಸಭೆಯ ಲೆಕ್ಕಪತ್ರಗಳನ್ನು ಪರಿಶೋಧನೆ ಮಾಡುತ್ತಾ ಬಂದಿದ್ದಾರೆ. ಇವರ ಕೆಲಸವು ತೃಪ್ತಿಕರವಾಗಿರುತ್ತದೆ. ಆದ್ದರಿಂದ 2016–17ನೇ ಸಾಲಿಗೂ ಸಹ ಇವರನ್ನೇ ಲೆಕ್ಕ–ಪರಿಶೋಧಕರನ್ನಾಗಿ ಮುಂದುವರಿಸಬಹುದಾಗಿದೆ. ಇವರ ಸಂಭಾವನೆಯನ್ನು ರೂ.25,000/–(ಇಪ್ಪತ್ತೈದು ಸಾವಿರ) ಅಂತಾ ನಿಗದಿ ಪಡಿಸಬಹುದು. ಇದಕ್ಕೆ ಮಾನ್ಯ ಸದಸ್ಯರುಗಳು ಒಪ್ಪಿಗೆಯನ್ನು ಕೊಡಬೇಕೆಂದು ಕೋರಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ನಿರ್ಣಯ:–**

**2016–17ನೇ ಸಾಲಿಗೆ ಮೆ॥ ಬಿ.ಆರ್.ವಿ.ಗೌಡ ಮತ್ತು ಕಂಪನಿ, ಚಾರ್ಟರ್ಡ್ ಅಕೌಂಟಟ್ಸ್, ಬೆಂಗಳೂರು ಇವರನ್ನು ಮಹಾಸಭೆಯ ಲೆಕ್ಕ–ಪರಿಶೋಧಕರನ್ನಾಗಿ ನೇಮಿಸಲು ಹಾಗೂ ಇವರಿಗೆ ವಾರ್ಷಿಕ 25,000/–ರೂ.ಗಳ ಸಂಭಾವನೆ ಕೊಡಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

**ಸೂಚಕರು :– ಶ್ರೀಮತಿ ರೇಣುಕಾ ಪರಮೇಶ್,** ಉಪಾಧ್ಯಕ್ಷರು, ರಾಷ್ಟ್ರೀಯ ಮಹಿಳಾ ವಿಭಾಗ

**ಅನುಮೋದಕರು :– ಶ್ರೀಮತಿ ಮಂಜುಳಾ ಕಿರಣ್,** ಅಧ್ಯಕ್ಷರು, ರಾಜ್ಯ ಮಹಿಳಾ ವಿಭಾಗ

**ಸದಸ್ಯರಾದ ಶ್ರೀ ಪಟ್ಟಣಶೆಟ್ಟಿಯವರು ಮಾತನಾಡಿ,** ವರದಿಯ ಪುಟ ಸಂಖ್ಯೆ 5ರಲ್ಲಿ ಉದಾತ್ತ ವಿಚಾರಗಳ, ಉದಾರ ಭಾವನೆಗಳ, ಉಚ್ಚ ಸಂಪ್ರದಾಯದ ನಮ್ಮ ಸಮಾಜ ಪಂಗಡ–ಒಳಪಂಗಡಗಳ ಭಾವನೆಗಳಿಂದ ಸೊರಗುತ್ತಿದೆ ಎಂಬ ಅಭಿಪ್ರಾಯವನ್ನು ನೀವೂ ಸಹ ಒಪ್ಪುತ್ತೀರೆಂದು ನಾವೆಲ್ಲ ಭಾವಿಸಿದ್ದೇವೆ. ಒಗ್ಗಟ್ಟು, ಏಕತೆ, ಸಮಗ್ರತೆಗಳ ಕಾರಣದಿಂದ ಜನಿಸಿದ ನಮ್ಮ ಸಂಸ್ಥೆಗೆ ಇಂತಹ ಸಣ್ಣ ಅಭಿಪ್ರಾಯಗಳಿಂದ ಖಂಡಿತ ಹಿನ್ನೆಡೆಯಾಗುತ್ತದೆ ಎಂದು ಹೇಳಲಾಗಿದೆ. 2015ರಲ್ಲಿ ಸರ್ಕಾರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿದೆ. ಸುಮಾರು ಒಳಪಂಗಡಗಳು ವೀರಶೈವ–ಲಿಂಗಾಯತ ಅನ್ನುವ ವಿಚಾರ ಮರೆತಿದ್ದಾರೆ. ಈ ಬಗ್ಗೆ ಮಹಾಸಭೆ ವ್ಯಾಪಕವಾಗಿ ಪ್ರಚಾರ ಮಾಡಿದಾಗ್ಯೂ ಕೂಡಾ ವೀರಶೈವ–ಲಿಂಗಾಯತ ಎಂದು ನಮೂದಿಸಿಲ್ಲ. ಅವರವರ ಒಳಪಂಗಡಗಳನ್ನು ಬರೆಸಿದ್ದಾರೆ. ಇದರಿಂದ ನಮ್ಮ ಜನಸಂಖ್ಯೆ 60 ಲಕ್ಷಕ್ಕೆ ಬಂದಿದೆ ಎಂದರೆ ಈ ಒಳಪಂಗಡಗಳೇ ಕಾರಣ. ಈ ವಿಷಯವನ್ನು ಪರಿಗಣನೆಗೆ ತೆಗೆದುಕೊಂಡು ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು ಎಂದರು.

**ಸೆಂಟ್ರಲ್ ಕಮಿಟಿ ಸದಸ್ಯರಾದ ಶ್ರೀ ಬಸವರಾಜ್ ದಿಂಡೂರುರವರು ಮಾತನಾಡಿ,** ಜಾತಿವಾರು ಜನಗಣತಿ ಮಾಡಬಾರದು ಎಂದು ಹೇಳಿ ಕೋರ್ಟಿನಲ್ಲಿ ಅಫಿಡೆವಿಟ್ ಹಾಕಿದ್ದೇವೆ. 1978ರಲ್ಲಿ ಭೀಮಣ್ಣ ಖಂಡ್ರೆಯವರು ಹಾವನೂರು ವರದಿಯನ್ನು ಹರಿದುಹಾಕಿ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಟ್ಟರು. ಈಗಿರುವ ನಮ್ಮ ಮಂತ್ರಿಗಳು ಈ ಬಗ್ಗೆ ಪ್ರತಿಭಟನೆ ಮಾಡಬೇಕು. ಮೊನ್ನೆ ನಾವು ಟಿ.ವಿ. 9ಗೆ ಹೋದಾಗ ಸ್ಪಷ್ಟವಾಗಿ ಹೇಳಿದ್ದೇವೆ. ಆದರೆ ಅವರು ಹೇಳುತ್ತಾರೆ ವೀರಶೈವ–ಲಿಂಗಾಯತರು 60 ಲಕ್ಷ ಇದ್ದಾರೆ ಎಂದು. ಆದರೆ ನಾವುಗಳು 1 ಕೋಟಿ 46 ಲಕ್ಷ ಜನರಿದ್ದೇವೆ. ಈ ಬಗ್ಗೆ ನಮ್ಮ ಬಳಿ ದಾಖಲೆ ಇದೆ ಎಂದರು.

**ಸದಸ್ಯರಾದ ಶ್ರೀ ಎಲ್.ಎಸ್.ಮಲ್ಲಿಕಾರ್ಜುನ್ ಮಾತನಾಡಿ,** ಸಂವಿಧಾನ ತಿದ್ದುಪಡಿ ಸಮಿತಿ ಮಾಡಿರುವ ಸಲಹೆಗಳ ಕುರಿತು ಸಭೆಗೆ ತಿಳಿಸಬೇಕು ಎಂದರು.

**ಉಪಾಧ್ಯಕ್ಷರಾದ ಶ್ರೀ ಬಿ.ಎಸ್.ಸಚ್ಚಿದಾನಂದಮೂರ್ತಿಯವರು ಮಾತನಾಡಿ,** ಸರ್ಕಾರ 2015ರಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿದಾಗ ಮಹಾಸಭೆಯಿಂದ ಕರಪತ್ರಗಳನ್ನು ತಾಲ್ಲೂಕು ಮತ್ತು ಜಿಲ್ಲೆಗಳಿಗೆ ಕಳುಹಿಸಲಾಗಿತ್ತು. ಜನಗಣತಿಯಲ್ಲಿ ಪ್ರತಿಯೊಬ್ಬರೂ ಭಾಗವಹಿಸಿ ಕಾಲಂ ನಂ.5 ರಲ್ಲಿ ಅಂದರೆ ಧರ್ಮದ ಕಾಲಂನಲ್ಲಿ ಸಂಕೇತ ಸಂಖ್ಯೆ.00 (ಇತರೇ) ಎಂದು ಬರೆಸಬೇಕು, ಕಾಲಂ ನಂ.6 ಅಂದರೆ ಜಾತಿ ಕಾಲಂನಲ್ಲಿ ಲಿಂಗಾಯತಕ್ಕೆ ಕೊಟ್ಟ ಸಂಕೇತ ಸಂಖ್ಯೆ.734 ಅಥವಾ ವೀರಶೈವಕ್ಕೆ ಕೊಟ್ಟ ಸಂಕೇತ ಸಂಖ್ಯೆ 1318ನ್ನು ಬರೆಸಬೇಕು ಹಾಗೂ ಕಾಲಂ ನಂ.7ರಲ್ಲಿ ನಿಮ್ಮ ನಿಮ್ಮ ಉಪಜಾತಿಗಳ ಸಂಕೇತ ಸಂಖ್ಯೆಗಳನ್ನು ಗುರುತಿಸಿಕೊಂಡು ದಾಖಲಿಸಬೇಕು. ಗಣತಿದಾರರು ನಮೂದಿಸಿದ್ದನ್ನು ಖಾತರಿ ಮಾಡಿಕೊಂಡು ಅನುಸೂಚಿಯ ಕೊನೆಯಲ್ಲಿ ಸಹಿಮಾಡಬೇಕು ಎಂದು ಕರಪತ್ರಗಳನ್ನು ಹಂಚುವ ವ್ಯವಸ್ಥೆ ಮಾಡಿದಾಗ್ಯೂ ಕೂಡಾ ಗೊಂದಲ ಸೃಷ್ಟಿಯಾಗಿರುತ್ತದೆ. **ಮುಂದುವರೆದು ಮಾತನಾಡಿ,** ಸಂವಿಧಾನ ತಿದ್ದುಪಡಿ ಸಮಿತಿ ರಚನೆ ಮಾಡಿ ಈಗಾಗಲೇ ವರದಿಯನ್ನು ಕೊಟ್ಟಿದ್ದಾರೆ. ವರದಿಯನ್ನು ಎಲ್ಲಾ ಜಿಲ್ಲಾ ಘಟಕಗಳಿಗೆ ಕಳುಹಿಸಿದ್ದೇವೆ. ಅವರಿಂದ ಸಲಹೆಗಳು ಬಂದ ನಂತರ ಒಂದು ವಿಶೇಷ ಸರ್ವಸದಸ್ಯರ ಸಭೆ ಕರೆಯಲಾಗುವುದು ಎಂದರು.

**ಸದಸ್ಯರಾದ ಶ್ರೀ ಮೋಹನ್‌ಚಂದ್ರ, ಕೊಡಗು ಜಿಲ್ಲೆ ಇವರು ಮಾತನಾಡಿ,** ಹಿಂದಿನ ಸಭೆಯಲ್ಲಿ ಮಹಾಪ್ರಧಾನ ಕಾರ್ಯದರ್ಶಿಗಳು ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ನಡೆಯುವ ಮಹಾಸಭೆಯ ಕಾರ್ಯಕ್ರಮಗಳಲ್ಲಿ ಪದಾಧಿಕಾರಿಗಳೂ ಭಾಗವಹಿಸಲು ಪ್ರಯತ್ನಿಸುತ್ತೇವೆ ಹಾಗೂ ಕೊಡಗಿಗೆ ವಿಶೇಷ ಪ್ರಾತಿನಿಧ್ಯ ನೀಡಲಾಗುವುದು ಎಂದು ಹೇಳಿದ್ದರು. ಇದುವರೆಗೆ ಯಾವ ಪ್ರಾತಿನಿಧ್ಯವನ್ನು ತೆಗೆದುಕೊಳ್ಳಲಾಗಿದೆ. ಕೊಡಗಿನಲ್ಲಿ ನಮ್ಮ ಜನಸಂಖ್ಯೆ ಕಡಿಮೆ ಇದೆ. ಸರ್ಕಾರದಿಂದ ಕೂಡಾ ಯಾವುದೇ ರೀತಿಯ ಸೌಲಭ್ಯಗಳನ್ನು ಒದಗಿಸಿರುವುದಿಲ್ಲ ಎಂದರು.

**ಮಹಾಸಭೆಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರು ಮಾತನಾಡಿ,** ಕೊಡಗು ಜಿಲ್ಲೆಯಲ್ಲಿ ನಡೆದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ನಾನು ಮತ್ತು ಮಹಾಪ್ರಧಾನ ಕಾರ್ಯದರ್ಶಿ **ಶ್ರೀ ಈಶ್ವರ ಖಂಡ್ರೆಯವರು** ಭಾಗವಹಿಸಿದ್ದೇವೆ. ಎಲ್ಲರೂ ಹೆಚ್ಚು ಹೆಚ್ಚು ಸದಸ್ಯತ್ವವನ್ನು ಮಾಡಿಸಬೇಕು. ನೀವು ಮಾಡಿಸಿದ ಸದಸ್ಯತ್ವದಲ್ಲಿ ಶೇಕಡಾವಾರು ನಿಮ್ಮ ಜಿಲ್ಲೆಗೆ ಕೊಡುತ್ತಿದ್ದೇವೆ. ದಿನಾಂಕ: 16-12-2016ರಂದು ಬೇಲೂರಿನಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಕಾರ್ಯಕ್ರಮ ತುಂಬಾ ಚೆನ್ನಾಗಿ ಆಯೋಜಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವರಾದ **ಶ್ರೀ ಎ.ಮಂಜುರವರು** ಕೂಡಾ ಭಾಗವಹಿಸಿದ್ದರು. ಶ್ರೀ ಮಂಜುರವರು ಸಮಾಜಕ್ಕೆ ಹಾಸನ ಜಿಲ್ಲೆಯಲ್ಲಿ 2 ಎಕರೆ ನಿವೇಶನ ನೀಡುವುದಾಗಿ ತಿಳಿಸಿದ್ದಾರೆ ಎಂದರು.

**ಶ್ರೀ ಜಿ.ಬಿ.ಪಾಟೀಲ್, ಸದಸ್ಯರು ಮಾತನಾಡಿ,** ಕಾರ್ಯಸೂಚಿಯಲ್ಲಿ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಪ್ರತಿಬಾರಿ ಇದೇ ರೀತಿ ಆಗುತ್ತಿದೆ. ನಾವು ತುಂಬಾ ಹಿಂದೆ ಉಳಿದಿದ್ದೇವೆ. ತಾವೆಲ್ಲಾ ಸಮಾಜದ ಬಗ್ಗೆ ಕಾಳಜಿ ವಹಿಸಬೇಕು ಎಂದರು.

**ಶ್ರೀ ಹರೀಶ್ ಆರಾಧ್ಯ, ಪ್ರಧಾನ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲೆ ಇವರು ಮಾತನಾಡಿ,** ಮಹಾಸಭೆಯಿಂದ ಪ್ರತಿಭಾ ಪುರಸ್ಕಾರವನ್ನು ಎಲ್ಲಾ ಜಿಲ್ಲೆಗಳಲ್ಲಿ ಮಾಡಲಾಗುತ್ತಿದೆ. ಇದಕ್ಕಾಗಿ ತಮಗೆಲ್ಲಾ ಧನ್ಯವಾದಗಳು. ಮಹಾಸಭೆಗೆ ಜಮೀನು ಪಡೆಯುವ ಬಗ್ಗೆ ನಮ್ಮ ಸ್ನೇಹಿತರಾದ ಶ್ರೀ ಎನ್.ನಂಜುಂಡೇಶ್‌ರವರ ಗ್ರಾಮದಲ್ಲಿ 5 ಎಕರೆ ಜಮೀನಿದ್ದು ಇದನ್ನು ಮಹಾಸಭೆಗೆ ಪಡೆಯಬಹುದಾಗಿದೆ. ಈ ಬಗ್ಗೆ ಅವರೇ ತಿಳಿಸುತ್ತಾರೆ. ಹಾಗೆಯೇ ಇಂದಿನ ಸಭೆಗೆ ನಮ್ಮ ಮಹಾಪ್ರಧಾನ ಕಾರ್ಯದರ್ಶಿಗಳು ಹಾಗೂ ಸಚಿವರು ಆದ ಶ್ರೀ ಈಶ್ವರ್ ಖಂಡ್ರೆಯವರ ಗೈರುಹಾಜರಿ ಬಗ್ಗೆ ಅಸಮಧಾನ ವ್ಯಕ್ತಪಡಿಸಿದರು.

**ಸದಸ್ಯರಾದ ಶ್ರೀ ಎನ್.ನಂಜುಂಡೇಶ್‌ರವರು ಮಾತನಾಡಿ,** ಮಹಾಸಭೆಗೆ ಈಗಾಗಲೇ 2 ಎಕರೆ ಜಮೀನು ದಾನ ಪಡೆಯಲಾಗಿದೆ. ಇದಕ್ಕಾಗಿ ಅಧ್ಯಕ್ಷರಿಗೆ ಧನ್ಯವಾದಗಳು. ನಮ್ಮ ಗ್ರಾಮವಾದ ಕೊಡಿಗೆಹಳ್ಳಿಯಲ್ಲಿ 5 ಎಕರೆ ಸರ್ಕಾರಿ ಜಮೀನಿದೆ. ಇದು ಕೆಂಪೇಗೌಡ ಬಡಾವಣೆಗೆ ಸೇರುತ್ತದೆ. ತಾವು ಸರ್ಕಾರದ ಮೇಲೆ ಒತ್ತಡ ತಂದು ಇದನ್ನು ಮಹಾಸಭೆಗೆ ಪಡೆದುಕೊಳ್ಳಬಹುದಾಗಿದೆ. ಇದಕ್ಕೆ ಸಂಬಂಧಪಟ್ಟ ಸಂಪೂರ್ಣ ವಿವರಗಳನ್ನು ಕೊಡುತ್ತೇನೆ. ಅಲ್ಲದೇ ಇದಕ್ಕೆ ಸಂಪೂರ್ಣ ಸಹಕಾರ ಕೊಡುತ್ತೇನೆ ಎಂದರು. ಮುಂದುವರೆದು ಮಾತನಾಡಿ,

ನಾವೆಲ್ಲಾ ಸಂಘಟನಾತ್ಮಕವಾಗಿ ಹೋರಾಟ ಮಾಡಬೇಕಾಗಿದೆ. ಸರ್ಕಾರ ನಮ್ಮನ್ನು ಎಲ್ಲಾ ರೀತಿಯಿಂದಲೂ ನಿರ್ಲಕ್ಷ್ಯ ಮಾಡುತ್ತಿದೆ. ಇಂದಿನ ಸರ್ಕಾರ ಜನಸಾಮಾನ್ಯರಿಗೆ ಸ್ಪಂದಿಸುತ್ತಿಲ್ಲ. ನಾವು ಮಹಾಸಭೆಯನ್ನು ಬಲಪಡಿಸಬೇಕಾಗಿದೆ. ನಾವೆಲ್ಲಾ ಒಗ್ಗಟ್ಟಾಗಿ ಸಂಘಟನೆ ಮಾಡಿದಾಗ ಮಾತ್ರ ಸಮಾಜ ಮುಂದುವರೆಯುತ್ತದೆ. ಎಲ್ಲಾ ತಾಲ್ಲೂಕು, ಜಿಲ್ಲೆಗಳಲ್ಲಿ ಭವನಗಳನ್ನು ಹೊಂದಲು ಸಾಧ್ಯವಿದೆ. ಹಾಗೆಯೇ ಹೊರರಾಜ್ಯಗಳಲ್ಲೂ ಹೆಚ್ಚಿನ ಮಟ್ಟದಲ್ಲಿ ಸಂಘಟನೆಯನ್ನು ಮಾಡಬೇಕಾಗಿದೆ ಎಂದರು.

**ಮಹಾಸಭೆಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರು ಮಾತನಾಡಿ,** ಧನ್ಯವಾದಗಳು, ತಾವು ತಮ್ಮ ಗ್ರಾಮದ ಸರ್ವೆನಂ. ಮತ್ತು ಇನ್ನುಳಿದ ದಾಖಲೆಗಳನ್ನು ಮಹಾಸಭೆಗೆ ಒದಗಿಸಿ ನಂತರ ಇದರ ಬಗ್ಗೆ ಕ್ರಮ ಜರುಗಿಸಲಾಗುದು. ಹಾಗೆಯೇ ನಮ್ಮ ಸಮಾಜವನ್ನು ಹಿಂದಿನಿಂದಲೂ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಇದಕ್ಕೆ ನಾವೆಲ್ಲಾ ಸಂಘಟಿತರಾಗಬೇಕು ಎಂದರು.

**ಸದಸ್ಯರಾದ ಗುಂಡಪ್ಪ, ಇವರು ಮಾತನಾಡಿ,** ಸರ್ಕಾರ ಎಲ್ಲಾ ಜಾತಿಯವರಿಗೂ ಮೀಸಲಾತಿಯನ್ನು ಕೊಡುತ್ತಿದ್ದಾರೆ. ಹಾಗೆಯೇ ಲಿಂಗಾಯಿತರಿಗೂ 5% ಮೀಸಲಾತಿ ಕೊಡಬೇಕಾಗಿದೆ. ಆದರೆ ವೀರಶೈವ– ಲಿಂಗಾಯತರನ್ನು ಬಿಡುತ್ತಿದ್ದಾರೆ. ಈ ಬಗ್ಗೆ ನಮ್ಮ ಉನ್ನತ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿಯವರ ಗಮನಕ್ಕೆ ತಂದಾಗ ಇದು ನನಗೆ ಬರುವುದಿಲ್ಲ ಎಂದು ಹೇಳಿದರು. ಎಲ್ಲಾ ಇಲಾಖೆಗಳಲ್ಲಿ ಜಾತಿವಾರು ಮೀಸಲಾತಿ ಇದೆ. ನಮಗೆ 5% ಕೊಡಬೇಕು. ಅದನ್ನೂ ಕೂಡಾ ಕೊಡುತ್ತಿಲ್ಲಾ. ಮಾನ್ಯ ಮುಖ್ಯಮಂತ್ರಿಗಳು ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತಿದ್ದಾರೆ. ಈ ವಿಷಯವನ್ನು ಮಹಾಸಭೆಯ ಅಧ್ಯಕ್ಷರು ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕು. ಇದರ ವಿರುದ್ಧ ನಾವು ಹೋರಾಟ ಮಾಡಬೇಕು. ಬಳ್ಳಾರಿಯ ಒಂದು ಶಿಕ್ಷಣ ಸಂಸ್ಥೆಯಲ್ಲಿ ಇದೇರೀತಿ ಆಗಿತ್ತು. ಇದರ ಬಗ್ಗೆ ಹೋರಾಟ ಮಾಡಿದ ಪರಿಣಾಮ ನಮ್ಮ ಸಮಾಜಕ್ಕೆ 5 ಪೋಸ್ಟ್ ಕೊಟ್ಟಿದ್ದಾರೆ. ನಮ್ಮ ಸಚಿವರಾದ ಶ್ರೀ ಈಶ್ವರ್ ಖಂಡ್ರೆಯವರು, ರಾಯರೆಡ್ಡಿಯವರಿಗೆ ಪತ್ರ ಬರೆದರೆ ಅದಕ್ಕೆ ಉತ್ತರವಿಲ್ಲ. ಸರ್ಕಾರ ಎಲ್ಲಾ ಇಲಾಖೆಗಳಲ್ಲೂ ನಮಗೆ ಸಿಗಬೇಕಾದ ಮೀಸಲಾತಿಯನ್ನು ತಪ್ಪಿಸುತ್ತಿದ್ದಾರೆ. ಇದರ ಬಗ್ಗೆ ಹೋರಾಟ ಮಾಡಬೇಕಾಗಿದೆ ಎಂದರು.

**ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಜಿ.ಎಂ.ಧನಂಜಯ, ಐ.ಎ.ಎಸ್.(ನಿ.) ಮಾತನಾಡಿ,** ಗುಂಡಪ್ಪನವರು ಹೇಳಿದಂತೆ ಈ ವಿಚಾರವಾಗಿ ನಮ್ಮ ಕಾರ್ಯಾಲಯದಿಂದ ಪತ್ರ ಬರೆಯಲಾಗಿದೆ. ಅದರ ಬಗ್ಗೆ ಸ್ವಲ್ಪಮಟ್ಟಿಗೆ ಸಫಲರಾಗಿದ್ದಾರೆ. ಮುಂದೆ ಇದರ ಬಗ್ಗೆ ಗಮನ ಹರಿಸಲಾಗುತ್ತದೆ ಎಂದರು.

**ಸದಸ್ಯರು ಮಾತನಾಡಿ,** ಇಂದಿನ ಸಭೆಯ ಅಜೆಂಡಾದಲ್ಲಿ 2016–17ನೇ ಸಾಲಿನ ಬಜೆಟ್ ಮಂಡಿಸಿರುವುದಿಲ್ಲ ಎಂದರು.

**ಕೋಶಾಧ್ಯಕ್ಷರಾದ ಶ್ರೀಮತಿ ಸುನಂದ ಗಿರೀಶ್‌ರವರು ಮಾತನಾಡಿ,** ವರದಿಯ ಪುಸ್ತಕದ ಪುಟ ಸಂಖ್ಯೆ 65 ಮತ್ತು 66ರಲ್ಲಿ ಬಜೆಟ್ ಮಂಡನೆ ಮಾಡಲಾಗಿದೆ ಎಂದರು.

**ಶ್ರೀ ಬಿ.ಉಮೇಶ್, ದೊಡ್ಡಕರೇನಹಳ್ಳಿ, ನೆಲಮಂಗಲ ತಾಲ್ಲೂಕು ಇವರು ಮಾತನಾಡಿ:–** ಇಂದಿನ ಸಭೆಯಲ್ಲಿ ಸದಸ್ಯರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ಸಭೆಗೆ ಹೆಚ್ಚಿನ ಸದಸ್ಯರು ಬರಬೇಕಾಗಿತ್ತು. ಮಹಾಸಭೆಯಿಂದ ವಾಹನದ ವ್ಯವಸ್ಥೆ ಮಾಡಿದರೆ ಹೆಚ್ಚು ಸಂಖ್ಯೆಯಲ್ಲಿ ಬರುತ್ತಾರೆ. ರೂ. 11.50 ಲಕ್ಷ ಹಣವನ್ನು ಜನಗಣತಿಗೆ ಖರ್ಚಾಗಿದೆ ಎಂದು ಹೇಳುತ್ತಿದ್ದೀರಾ. ಅದೇ ರೀತಿ ಸಭೆಯ ವರದಿಯನ್ನು ಸಹ ಪೋಸ್ಟ್ ಮೂಲಕ ಕಳುಹಿಸಬೇಕು ಎಂದರು.

**ಉಪಾಧ್ಯಕ್ಷರಾದ ಶ್ರೀ ಬಿ.ಎಸ್.ಸಚ್ಚಿದಾನಂದಮೂರ್ತಿಯವರು ಮಾತನಾಡಿ,** ಎಲ್ಲಾ ಸದಸ್ಯರಿಗೂ ಮುಕ್ತವಾಗಿ ಚರ್ಚೆಗೆ ಅವಕಾಶ ನೀಡಲಾಗಿದೆ. ಸದಸ್ಯರುಗಳು ಮಾತನಾಡಬಹುದು. ಉಮೇಶ್‌ರವರೇ ಜನಗಣತಿಗೆ ರೂ.11.50 ಲಕ್ಷ ರೂ.ಗಳನ್ನು ಎಲ್ಲಾ ತಾಲ್ಲೂಕು ಮತ್ತು ಜಿಲ್ಲೆಗಳಿಗೆ ಕರಪತ್ರಗಳನ್ನು ಹಂಚಲು ಹಣವನ್ನು ಕೊಡಲಾಗಿರುತ್ತದೆ. ಸುಮಾರು 16 ಸಾವಿರ ಸದಸ್ಯರುಗಳಿಗೆ ವರದಿಯ ಪುಸ್ತಕಗಳನ್ನು ಪೋಸ್ಟ್ ಮೂಲಕ ಕಳುಹಿಸಿಲು ಸಾಧ್ಯವಾಗುವುದಿಲ್ಲ. ಒಂದು ಪುಸ್ತಕ ಕಳುಹಿಸಲು ಸುಮಾರು 60 ರೂ.ಗಳು ಖರ್ಚಾಗುತ್ತದೆ. ವರದಿಯ ಪುಸ್ತಕವನ್ನು ನಮ್ಮ ವೆಬ್‌ಸೈಟ್‌ನಲ್ಲಿ ಕೂಡಾ ಪ್ರಕಟಿಸಲಾಗಿದೆ ಎಲ್ಲರು ನೋಡಬಹುದು ಎಂದರು.

ಸದಸ್ಯರು ಮಾತನಾಡಿ, ಹಿಂದಿನ ಸಭೆಯಲ್ಲಿ ಮಹಾಪ್ರಧಾನ ಕಾರ್ಯದರ್ಶಿಗಳು ಗಂಗಾ ಕಲ್ಯಾಣ ಯೋಜನೆಯನ್ನೇ 3ಬಿ, ವೀರಶೈವ–ಲಿಂಗಾಯತರಿಗೆ ಕೊಡುವ ಬಗ್ಗೆ ಚರ್ಚಿಸಿದಾಗ ಈ ವಿಷಯವನ್ನು ಗಮನದಲ್ಲಿಡಲಾಗುವುದು ಎಂದು ತಿಳಿಸಿದ್ದಾರೆ. ಯಾವ ಕ್ರಮ ಜರುಗಿಸಲಾಗಿದೆ ತಿಳಿಸಿ ಎಂದು ಕೇಳಿ, ಸರ್ಕಾರ ಶೇಕಡಾ 70% ರಿಸರ್ವೇಷನ್ ಮಾಡಲು ಹೊರಟಿದ್ದಾರೆ. ನಮ್ಮ ಸಮಾಜದವರಿಗೆ ಶೇಕಡಾ 5% ಕೊಟ್ಟಿದ್ದಾರೆ. ಅದನ್ನು ಸಹ ಸರಿಯಾಗಿ ಕೊಡುತ್ತಿಲ್ಲ. ಹಿಂದುಳಿದ ವರ್ಗದವರು ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ಮಾಡುವವರಿಗೆ ಸರ್ಕಾರದಿಂದ ಲ್ಯಾಪ್‌ಟಾಪ್ ಅನುಕೂಲ ಹಾಗೂ ರೂ.35,000/–ಗಳ ಆರ್ಥಿಕ ಸಹಾಯ ಮಾಡಿಕೊಡುತ್ತಿದ್ದಾರೆ. ಈ ಅನುಕೂಲ 3ಬಿ ಕೆಟಗರಿಯ ನಮಗೂ ಸಿಗಬೇಕು. ನಮ್ಮಲ್ಲೂ ತೀರಾ ಹಿಂದುಳಿದವರೂ ಇದ್ದಾರೆ ಅವರಿಗೆ ಅನುಕೂಲವಾಗಬೇಕಾಗಿದೆ ಎಂದರು.

**ಶ್ರೀ ಹೆಚ್.ವಿ.ಬಸವರಾಜ್, ಅಧ್ಯಕ್ಷರು, ಮೈಸೂರು ಜಿಲ್ಲಾ ಘಟಕ ಇವರು ಮಾತನಾಡಿ,** ನಮ್ಮದು ಸಾವಿರಾರು ವರ್ಷಗಳ ಇತಿಹಾಸ ಇರುವ ಧರ್ಮ. ವೀರಶೈವ–ಲಿಂಗಾಯತ ಧರ್ಮ ಎಂದು ಹೇಳಿಕೊಂಡು ಬಂದಿದ್ದೇವೆ. ನಿಕಟಪೂರ್ವ ಅಧ್ಯಕ್ಷರಾದ ಡಾ.ಭೀಮಣ್ಣ ಖಂಡ್ರೆಯವರ ನೇತೃತ್ವದಲ್ಲಿ ಬೆಂಗಳೂರು ರಾಜಧಾನಿಯಲ್ಲಿ **ವೀರಶೈವ–ಲಿಂಗಾಯತ ಭವನ** ನಿರ್ಮಾಣವಾಗಿದೆ. ಅವರು ನಮ್ಮ ಮಾರ್ಗದರ್ಶಕರಾಗಿ ನಮ್ಮ ಜೊತೆಯಲ್ಲೇ ಇದ್ದಾರೆ. ನಾನು ಅಧ್ಯಕ್ಷರನ್ನು ಮನವಿ ಮಾಡುತ್ತೇನೆ. ಎಲ್ಲಾ ಜಿಲ್ಲೆಯ ಸದಸ್ಯರು ತಮ್ಮೊಂದಿಗಿದ್ದೇವೆ. ತಾವು ಒಂದು ನಿರ್ಣಯ ತೆಗೆದುಕೊಂಡರೆ ಅದನ್ನು ನಾವೆಲ್ಲಾ ಪಾಲಿಸುತ್ತೇವೆ. ಸದಸ್ಯತ್ವದಲ್ಲಿ ಶೇಕಡಾ 90% ಹಣವನ್ನು ಕೊಡುತ್ತಿದ್ದೀರಾ. ನಾವು ಸದಸ್ಯತ್ವ ಮಾಡಲು ಹೋದರೆ ಜನರು ಮಹಾಸಭೆ ನಮಗೆ ಏನು ಮಾಡುತ್ತಿದೆ ಎಂದು ಕೇಳುತ್ತಿದ್ದಾರೆ. ಜಿಲ್ಲಾ ಘಟಕದ ಸಹಕಾರ ಪಡೆದುಕೊಂಡು ಜಿಲ್ಲೆಯಲ್ಲಿ ವೀರಶೈವ–ಲಿಂಗಾಯತ ಭವನವನ್ನು ಕಟ್ಟಬೇಕು. ಆಯಾ ಜಿಲ್ಲೆಯ ಸದಸ್ಯರು ತಮ್ಮ ಜೊತೆ ಇರುತ್ತಾರೆ ಎಂದರು.

ಸದಸ್ಯರು ಮಾತನಾಡಿ, ಎಲ್ಲಾ ತಾಲ್ಲೂಕುಗಳಲ್ಲೂ ಘಟಕಗಳನ್ನು ರಚನೆಮಾಡಿ, ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ನೇಮಕಮಾಡಿ, ಸಂಘಟನೆ ಮಾಡಲು ಅವಕಾಶ ಮಾಡಿಕೊಡಬೇಕು. ತಾವು ಯಾವ ಯಾವ ಕಡೆ ಸಂಘಟನೆಗೆ ಒತ್ತುನೀಡಿ ಪ್ರವಾಸವನ್ನು ಕೈಗೊಂಡಿದ್ದೀರಿ ತಿಳಿಸಬೇಕು ಎಂದರು.

**ಮಹಾಸಭೆಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರು ಮಾತನಾಡಿ,** ಸಂಘಟನೆಗಾಗಿ ಹಲವಾರು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಹಾವೇರಿ, ಹಾಸನ, ಕೊಡಗು, ಅಲ್ಲದೇ ಹೊರರಾಜ್ಯಗಳಾದ ತಮಿಳುನಾಡು, ಕೇರಳ, ಮಹಾರಾಷ್ಟ್ರಗಳಲ್ಲಿ ಪ್ರವಾಸ ಮಾಡಿದ್ದೇನೆ. 2017ರ ಜನವರಿಯಲ್ಲಿ ಗೋವಾ ರಾಜ್ಯ ಘಟಕದ ವತಿಯಿಂದ ಸಮಾಜದ ಕಾರ್ಯಕ್ರಮ ಹಮ್ಮಿಕೊಳ್ಳಲಿದ್ದಾರೆ. ಆ ಕಾರ್ಯಕ್ರಮದಲ್ಲೂ ಭಾಗವಹಿಸಲಿದ್ದೇನೆ ಎಂದು ತಿಳಿಸಿದರು.

**ಶ್ರೀಮತಿ ರೇಣುಕಾ ಪರಮೇಶ್, ಉಪಾಧ್ಯಕ್ಷರು, ರಾಷ್ಟ್ರೀಯ ಮಹಿಳಾ ವಿಭಾಗ, ತುಮಕೂರು** ಇವರು ಮಾತನಾಡಿ, ಮಹಾಸಭೆಯ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸುವ ಮೊದಲು ಜಿಲ್ಲಾ ಘಟಕಗಳು ಒಂದು ಮೀಟಿಂಗ್ ನಡೆಸಿ ಅಲ್ಲಿರುವ ನ್ಯೂನತೆಗಳನ್ನು ಪಟ್ಟಿಮಾಡಿ ಮಹಾಸಭೆಯ ಅಧ್ಯಕ್ಷರ ಗಮನಕ್ಕೆ ತರಬೇಕು. ಅದು ಸಭೆಯಲ್ಲಿ ಚರ್ಚೆಯಾಗಬೇಕು. ಸಮಾಜಕ್ಕೆ ಸೇವೆ ಮಾಡಿದವರೇ ಮಾತನಾಡಬೇಕು ಎಂದು ಯಾರು ಹೇಳಿಲ್ಲಾ. ಸಾಕಷ್ಟು ಜನರು ಇಂದು ಮಾತನಾಡುತ್ತಿದ್ದೀರಾ. ಆದರೆ ನನ್ನ ಅನಿಸಿಕೆ ಏನೆಂದರೆ ನಾವು ಈ ಸಮಾಜದಲ್ಲಿ ಹುಟ್ಟಿದ್ದೇವೆ. ಈ ಸಮಾಜಕ್ಕೆ ನಾವು ಏನು ಸೇವೆ/ಕೊಡುಗೆ ನೀಡಿದ್ದೇವೆ ಎಂಬುದನ್ನು ಎಲ್ಲರೂ ಅವಲೋಕಿಸಿಕೊಳ್ಳಬೇಕಾಗಿದೆ. ಒಬ್ಬೊಬ್ಬ ಶರಣ ಶರಣೆಯರು ಕನಿಷ್ಠ ಪಕ್ಷ 50 ಜನರನ್ನು ಸದಸ್ಯರನ್ನಾಗಿ ಮಾಡಬೇಕು. ಎಲ್ಲರೂ ಸಂಘಟಿತರಾಗಬೇಕು. ನಮ್ಮಲ್ಲಿ ಒಗ್ಗಟ್ಟಿದ್ದರೆ ಯಾರೂ ನಮ್ಮನ್ನು ತುಳಿಯುವುದಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿ ಮೊದಲಿನಿಂದಲೂ ಸಂಘಟನೆಯ ಕೊರತೆಯಿದೆ. ಎಲ್ಲಾ ಸಮಿತಿಗಳಲ್ಲಿ ಎಲ್ಲಾ ಜಿಲ್ಲೆಗಳಿಂದ ಮಹಿಳೆಯರಿಗೆ ಪ್ರಾತಿನಿದ್ಯಕೊಡಬೇಕು ಎಂದು ಅಧ್ಯಕ್ಷರಲ್ಲಿ ಮನವಿ ಮಾಡಿದರು.

**ಶ್ರೀ ಯಜಮಾನ್ ಪಾಲನೇತ್ರ, ಸದಸ್ಯರು, ಬೆಂಗಳೂರು** ಇವರು ಮಾತನಾಡಿ, ಅಧ್ಯಕ್ಷರೇ, ತಾವು ಅನೇಕ ಸಂಘ–ಸಂಸ್ಥೆಗಳನ್ನು ಹಾಗೂ ವಿದ್ಯಾಸಂಸ್ಥೆಗಳನ್ನು ಹುಟ್ಟುಹಾಕಿದ್ದೀರಿ. ಅಖಿಲ ಭಾರತ ವೀರಶೈವ ಮಹಾಸಭೆಯ ವತಿಯಿಂದ ಯಾವುದಾದರೂ ಒಂದು ವಿದ್ಯಾಸಂಸ್ಥೆಯನ್ನು ತಮ್ಮ ಕಾಲದಲ್ಲೇ ಪ್ರಾರಂಭಿಸಬೇಕು ಎಂದು ಮನವಿ ಮಾಡಿದರು.

**ವಿಷಯ ನಂ. 10:– ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು.**

**A) ಸಭೆಯಲ್ಲಿ ಚರ್ಚಿಸಲು ಬಂದಿರುವ ವಿಷಯಗಳು:–**

ಅಧ್ಯಕ್ಷರ ಅಪ್ಪಣೆ ಮೇರೆಗೆ ವಿಷಯಗಳನ್ನು ಪ್ರಸ್ತಾಪಿಸಲು ಸದಸ್ಯರುಗಳಿಂದ ಪತ್ರಗಳು ಬಂದಿರುತ್ತವೆ. ಅದರಲ್ಲಿ ಹಾಜರಿದ್ದವರು ಪ್ರಸ್ತಾಪಿಸಿದ ಪ್ರಶ್ನೆಗಳಿಗೆ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಉಪಾಧ್ಯಕ್ಷರಾದ ಶ್ರೀ ಬಿ.ಎಸ್.ಸಚ್ಚಿದಾನಂದ ಮೂರ್ತಿಯವರು ಸಭೆಯ ಮುಂದೆ ಮಂಡಿಸಿದರು.

1. ಶ್ರೀ ಬಿ.ಹೆಚ್.ಬಾದರಬಂಡಿ, ಪ್ರಧಾನ ಕಾರ್ಯದರ್ಶಿ, ಬಿಜಾಪುರ ಜಿಲ್ಲಾ ಘಟಕ

| ಚರ್ಚೆಯ ವಿಷಯ | | ಉತ್ತರ |
|---|---|---|
| 1. | ಈಗಿರುವ ಆಜೀವ ಸದಸ್ಯತ್ವ ರೂ.250 ರಿಂದ ರೂ.500 ಕ್ಕೆ ಹೆಚ್ಚಿಸಬೇಕು. ಈ ಮೊತ್ತವನ್ನು ಯಾವುದೋ ಕಾಲಕ್ಕೆ ನಿರ್ದರಿಸಿದ್ದು ಇರುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಹೆಚ್ಚಿಸುವುದು ಅನಿವಾರ್ಯ. | ಸೂಕ್ತ ಸಲಹೆಯಾಗಿದೆ.<br>ಈ ವಿಷಯವನ್ನು ಸಂವಿಧಾನ ತಿದ್ದುಪಡಿ ಸಮಿತಿಯ ಗಮನಕ್ಕೆ ತರಲಾಗುವುದು. |

2. ಶ್ರೀ ಪಿ.ಗುರುಮಾದಯ್ಯ, ಅಧ್ಯಕ್ಷರು, ಚನ್ನಪಟ್ಟಣ ತಾ॥ ಘಟಕ

| ಚರ್ಚೆಯ ವಿಷಯ | | ಉತ್ತರ |
|---|---|---|
| 1. | ನನ್ನ ಮನವಿಯನ್ನು ಪುರಸ್ಕರಿಸಿ ಪ್ರತಿಭಾ ಪುರಸ್ಕಾರಕ್ಕೆ ನೀವು ನೀಡುತ್ತಿದ್ದ ಪ್ರಶಸ್ತಿ ಪತ್ರ ಮತ್ತು ನಗದು ಜೊತೆಗೆ ಈ ಬಾರಿ ನಮ್ಮ ಧರ್ಮ ಸಂಕೇತವಾದ ಕರಡಿಗೆ, ಲಿಂಗು, ರುದ್ರಾಕ್ಷಿ, ವಸ್ತ್ರ, ಶಿವದಾರ ನೀಡಿರುವುದಕ್ಕೆ ಕೋಟಿ ಕೋಟಿ ಅಭಿನಂದನೆಗಳು. | ತಮಗೂ ಕೂಡ ಧನ್ಯವಾದಗಳು.<br>ಸದಸ್ಯರ ಸಲಹೆಗಳನ್ನು ಆದರಿಸಿ ಈ ಕಾರ್ಯಕ್ರಮವನ್ನು ಕಾರ್ಯಗತ ಮಾಡುತ್ತಿದ್ದೇವೆ. ತಮ್ಮಗಳ ಸಹಕಾರ ಅಗತ್ಯವಿರುತ್ತದೆ. |
| 2. | ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶೇ. 85% ನಿಗದಿ ಮಾಡಿ ಪ್ರತಿಭಾ ಪುರಸ್ಕಾರ ನೀಡುವುದು. ಉದಾ: ಈ ಸಾಲಿನಲ್ಲಿ ರಾಮನಗರ ಜಿಲ್ಲೆಗೆ ನೀಡಿರುವ ಎಲ್ಲಾ ಪ್ರತಿಭಾ ಪುರಸ್ಕಾರವು ಖಾಸಗಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲಭಿಸಿದೆ. ಆದ್ದರಿಂದ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಲು ಅವಕಾಶ ನೀಡುವುದು. | ಸಾಮಾನ್ಯವಾಗಿ ಎಲ್ಲಾ ಶಾಲಾಮಕ್ಕಳಿಂದ ಅರ್ಜಿಯನ್ನು ಆಹ್ವಾನಿಸಿರುತ್ತೇವೆ. ಖಾಸಗಿ ಶಾಲೆಯವರು ಆಸಕ್ತಿ ವಹಿಸಿ ಅರ್ಜಿಸಲ್ಲಿಸಿರುತ್ತಾರೆ. ಸರ್ಕಾರಿ ಶಾಲೆಮಕ್ಕಳನ್ನು ಸಹ ಗುರುತಿಸಿ ಪ್ರೋತ್ಸಾಹಿಸಬೇಕು. |
| 3. | ಹೋಬಳಿ ಹಂತದಿಂದ ಹಿಡಿದು ಜಿಲ್ಲಾ ಹಂತದವರೆಗೆ ಸದಸ್ಯತ್ವ ನೋಂದಣಿ ಮಾಡಿಸಲು ರಾಜ್ಯ/ಕೇಂದ್ರ ಸಮಿತಿಯ ಪದಾಧಿಕಾರಿಗಳನ್ನು ಜಿಲ್ಲಾವಾರು ಸಂಘಟನೆಗಾಗಿ ನೇಮಿಸಿ, ಅವರುಗಳು ಆಯಾ ಜಿಲ್ಲೆಯಲ್ಲಿ ಪ್ರವಾಸಮಾಡಿ ಪ್ರಯತ್ನಿಸುವುದು. ಯಾವ ಜಿಲ್ಲೆಯವರು ಹೆಚ್ಚಿಗೆ ಸದಸ್ಯರನ್ನು ಮಾಡುತ್ತಾರೋ ಅವರಿಗೆ ಸಾಮಾನ್ಯ ಸಭೆಯಲ್ಲಿ ಅಭಿನಂದಿಸುವುದು. | ಸೂಕ್ತ ಸಲಹೆಯಾಗಿದೆ.<br>ಈ ಬಗ್ಗೆ ಗಮನಹರಿಸಲಾಗುವುದು. |

| | | |
|---|---|---|
| 4. | ಎಲ್ಲಾ ಹಂತದ ಸದಸ್ಯತ್ವದ ನೋಂದಣಿ ಹಣದಲ್ಲಿ ಸಾಧ್ಯವಾದಷ್ಟು ಹಣವನ್ನು ತಾಲ್ಲೂಕು ಶಾಖೆಗಳಿಗೆ ನೀಡುವುದು. | **ಭವನ** ಹಾಗೂ **ಉಚಿತ ವಸತಿ ನಿಲಯ** ಸ್ಥಾಪನೆಗೆ ಎಲ್ಲಾ ಹಂತದ ಸದಸ್ಯತ್ವದಲ್ಲಿ ಶೇಕಡ 90ರಷ್ಟು ಹಣವನ್ನು ಈಗಾಗಲೇ ಕೊಡಲಾಗುತ್ತಿದೆ. |
| 5. | ಉಳವಿಯಲ್ಲಿ ನಡೆದ ಸಮಾರಂಭದಂತೆ ಪ್ರತಿ ವರ್ಷ ಅಥವಾ ಎರಡು ವರ್ಷಕ್ಕೊಮ್ಮೆ ನಮ್ಮ ಪುಣ್ಯ ಕ್ಷೇತ್ರಗಳಾದ ಕೂಡಲಸಂಗಮ, ಬಸವನಬಾಗೇವಾಡಿ, ಬಸವಕಲ್ಯಾಣ, ಎಸ್.ಆರ್.ಎಸ್.ಬೆಟ್ಟ ಅಥವಾ ಹೊರರಾಜ್ಯದ ಶ್ರೀಶೈಲ, ಮಹಾನಂದಿಗಳಲ್ಲಿ ಕಾರ್ಯಕ್ರಮ ಏರ್ಪಡಿಸುವುದು. | ಸೂಕ್ತ ಸಲಹೆಯಾಗಿದೆ.<br>ಈ ಬಗ್ಗೆ ಗಮನಹರಿಸಲಾಗುವುದು. |
| 6. | ಜನಗಣತಿಯ ಮಾಹಿತಿ ಸರಿಯಾಗಿ ಸಮುದಾಯಕ್ಕೆ ತಿಳಿದಿಲ್ಲ. ಪತ್ರಿಕೆಗಳ ಮುಖಾಂತರ ಸಮಾಜದಲ್ಲಿ ಜಾಗೃತಿ ಮೂಡಿಸುವ ಕಾರ್ಯಗಳನ್ನು ಮಹಾಸಭಾ ಹಮ್ಮಿಕೊಳ್ಳುವುದು. | ಜಾತಿ ಜನಗಣತಿ ಸಂದರ್ಭದಲ್ಲಿ ಯಾವ ರೀತಿ ಬರೆಸಬೇಕೆಂಬುದನ್ನು ಕರಪತ್ರ, ಸ್ಟಿಕರ್ & ಕಾರ್ಯಕ್ರಮವನ್ನು ಆಯೋಜಿಸುವ ಮುಖಾಂತರ ಹಾಗೂ ಜಾಹೀರಾತು ನೀಡುವ ಮೂಲಕ ತಿಳಿಸಿದ್ದೇವು. ಈಗ ಜಾತಿಗಣತಿ ಮುಗಿದಿದೆ. ಮುಂದೆ ನಡೆದರೆ ಹೆಚ್ಚು ಆಸಕ್ತಿ ವಹಿಸಲಾಗುವುದು. |
| 7. | ಅಖಿಲ ಭಾರತ ವೀರಶೈವ ಮಹಾಸಭಾ ನಡೆದುಬಂದ ದಾರಿ, ಹಾನಗಲ್ ಶಿವಕುಮಾರ ಸ್ವಾಮಿಗಳ ಜೀವನ ಚರಿತ್ರೆ ಆದರಿಸಿ ಹಾಗೂ ಶಿವ–ಶರಣ–ಶರಣೆಯರ ಕಿರುನಾಟಕಗಳನ್ನು ಸಂಘದ ವತಿಯಿಂದ ನಡೆಸುವುದು ಮತ್ತು ಎಲ್ಲರಿಗೂ ತಲುಪುವಂತೆ ವ್ಯವಸ್ಥೆ ಮಾಡುವುದು. | ಈಗಾಗಲೇ ಹರಳಯ್ಯ–ಮಧುವರಸರ ಕಲ್ಯಾಣಕ್ರಾಂತಿಯ ಕುರಿತ **"ಶರಣು ಶರಣಾರ್ಥಿ"** ಎಂಬ ಕಿರುನಾಟಕವನ್ನು ರಚಿಸಿ ಪ್ರದರ್ಶಿಸಲಾಗುತ್ತಿದೆ. ಇದರ ಪ್ರಯೋಜನವನ್ನು ಪಡೆಯಬಹುದಾಗಿದೆ ಮತ್ತು ತಮ್ಮ ಸಲಹೆಯ ಬಗ್ಗೆ ಗಮನಹರಿಸಲಾಗುವುದು. |
| 8. | ಮಹಾಸಭೆಯ ಸಾಮಾನ್ಯ ಸಭೆಯನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆಸುವಂತೆ ತೀರ್ಮಾನಿಸಲು ಕೋರಿಕೆ. | ರಾಜ್ಯ ಮತ್ತು ಜಿಲ್ಲಾ ಘಟಕಗಳು ಸಭೆ ನಡೆಸಲು ಮನವಿ ಮಾಡಿದರೆ ಆ ಸ್ಥಳಗಳಲ್ಲಿ ಸರ್ವಸದಸ್ಯರ ಸಭೆ ಕರೆಯಲು ಕ್ರಮ ಜರುಗಿಸಲಾಗುವುದು. |

3. ಶ್ರೀ ಚಂದ್ರಶೇಖರ ಮುರಿಗೆಪ್ಪ ಸೊಪ್ಪಿನ, ರಾಣಿಬೆನ್ನೂರು.

| | ಚರ್ಚೆಯ ವಿಷಯ | ಉತ್ತರ |
|---|---|---|
| 1. | ರಾಣೇಬೆನ್ನೂರಿನಲ್ಲಿ ಹಾನಗಲ್ ಕುಮಾರ ಶಿವಯೋಗಿಗಳ ಮಹಾದ್ವಾರವನ್ನು ನಿರ್ಮಿಸುವ ಕುರಿತು:<br>ಈಗಾಗಲೇ ಮೇಲಿನ ವಿಷಯದ ಬಗ್ಗೆ ಕಳೆದ ಎರಡು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಿದ್ದು ಅಧ್ಯಕ್ಷರಾದ ಡಾ.ಶಾಮನೂರು ಶಿವಶಂಕರಪ್ಪನವರು ಲೋಕೋಪಯೋಗಿ ಇಲಾಖೆಗೆ ಪತ್ರ ಬರೆದದ್ದು ಇದ್ದು ಹಾವೇರಿ ಕಛೇರಿಯಿಂದ ರಾಣೇಬೆನ್ನೂರ ಲೋಕೋಪಯೋಗಿ ಇಲಾಖೆಗೆ ಕಳಿಸಿದ್ದು ಅವರು ಈಗಾಗಲೇ ಅಂದಾಜು ಪಟ್ಟಿಯನ್ನು ಹಾವೇರಿ ಲೋಕೋಪಯೋಗಿ ಇಲಾಖೆಗೆ ಕಳಿಸಿರುತ್ತಾರೆ. ಸದರಿ ಅಂದಾಜು ಪಟ್ಟಿಗೆ ತಾವುಗಳು ಹಣಕಾಸಿನ ಅನುದಾನವನ್ನು ಒದಗಿಸಿ ಮೇಲಿನ ಕಾರ್ಯಕ್ಕೆ ಚಾಲನೆ ನೀಡುತ್ತೀರೆಂದು ನಂಬಿರುತ್ತೇನೆ. | ಅಗತ್ಯ ಕ್ರಮ ಕೈಗೊಳ್ಳಲಾಗುವುದು |

4. ಶ್ರೀ ಶಿವಣ್ಣ ಬೆಲ್ಲದ, ಅಧ್ಯಕ್ಷರು, ಧಾರವಾಡ ಜಿಲ್ಲಾ ಘಟಕ

| | ಚರ್ಚೆಯ ವಿಷಯ | ಉತ್ತರ |
|---|---|---|
| 1. | ಬೈಲಾ ಪ್ರಕಾರ ದೇಣಿಗೆದಾರರಿಗೆ ನೀಡಬಹುದಾದ ಸದಸ್ಯತ್ವವನ್ನು ಧಾರವಾಡ ಜಿಲ್ಲಾ ಘಟಕದ ಸಮುದಾಯ ಭವನ ನಿರ್ಮಾಣಕ್ಕಾಗಿ ನೀಡಿದ ದೇಣಿಗೆದಾರರ ಪೈಕಿ ಕೇವಲ 1 ಲಕ್ಷ ರೂಪಾಯಿ ದೇಣಿಗೆ ನೀಡಿದ ಕೆಲವು ಸದಸ್ಯರಿಗೆ ಮಾತ್ರ ನೀಡಿದ್ದಾರೆ. ಇನ್ನುಳಿದ ಎಲ್ಲ ದೇಣಿಗೆದಾರರಿಗೆ ಅವರವರ ಮೊತ್ತಕ್ಕೆ ಅನುಗುಣವಾಗಿ ಸದಸ್ಯತ್ವ ನೀಡಲು ತೀರ್ಮಾನಿಸಬೇಕು. | ರೂ. 1 ಲಕ್ಷ ದೇಣಿಗೆ ನೀಡಿದವರಿಗೆ ಕಾರ್ಯಕಾರಿ ಸಮಿತಿ ಕೊಟ್ಟಿರುವ ಸದಸ್ಯತ್ವವೇ ಕಾನೂನು ಬಾಹೀರವಾಗಿರುವುದೆಂದು ಮಾನ್ಯ ಸದಸ್ಯರು ತೀರ್ಮಾನಿಸುತ್ತಿರುತ್ತಾರೆ ಹಾಗೂ ಆ ತೀರ್ಮಾನ ರದ್ದುಪಡಿಸಲು ಸದಸ್ಯರಿಂದ ಒತ್ತಡ ಬಂದಿದ್ದು, ಈ ವಿಷಯದ ಬಗ್ಗೆ ಶೀಘ್ರ ಕ್ರಮಕೈಗೊಳ್ಳಲಾಗುವುದು. |
| 2. | ಸಮುದಾಯ ಭವನ ನಿರ್ಮಾಣ ಸಮಯದಲ್ಲಿ ನೇರವಾಗಿ ಮಹಾಸಭೆಗೆ ಸಲ್ಲಿಸಿದ ದೇಣಿಗೆ/ಸದಸ್ಯತ್ವದ ಹಣ ಜಿಲ್ಲಾ ಘಟಕದ ಕಟ್ಟಡ ನಿರ್ಮಾಣಕ್ಕಾಗಿ ಸಂದಾಯವಾಗಬೇಕಾದ ಹಣವನ್ನು ಪ್ರತಿ ತಿಂಗಳು ಸಂದಾಯ ಮಾಡಲು ವಿನಂತಿ. ಅದರೊಂದಿಗೆ ಹೊಸದಾಗಿ ನೊಂದಾಯಿತ ಸದಸ್ಯರ ಯಾದಿಯನ್ನು ಕಳಿಸಬೇಕು. ಸುಮಾರು 5–6 ತಿಂಗಳುಗಳ ಹಿಂದಿನಿಂದ ಸಂದಾಯವಾದ ಹಲವಾರು ಲಕ್ಷ ಹಣ ಮಹಾಸಭೆಯಲ್ಲಿ ಮಾತ್ರ ಜಮಾ ಇದ್ದು ಅದನ್ನು ತಕ್ಷಣ ಜಿಲ್ಲಾ ಘಟಕಕ್ಕೆ ಕಳಿಸುವ ವ್ಯವಸ್ಥೆ ಮಾಡಬೇಕು. | ದಿನಾಂಕ: 13–01–2013ರಿಂದ ಈ ಉದ್ದೇಶಕ್ಕೆ ಸದಸ್ಯತ್ವದ ಎಲ್ಲಾ ವರ್ಗಗಳಲ್ಲಿ ಶೇಕಡ 90ರಷ್ಟು ಮೊತ್ತವನ್ನು ಕೊಡಲಾಗುತ್ತಿದೆ. ಇದರ ಜೊತೆಗೆ ಸದಸ್ಯರ ಯಾದಿಯನ್ನು ಕಳುಹಿಸಲಾಗುವುದು. |
| 3. | ಘಟನಾವಳಿ ತಿದ್ದುಪಡಿಯ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದು ಈಗಾಗಲೇ ಮಹಾಸಭೆಯಲ್ಲಿ ರಚಿಸಿದ ಕರಡನ್ನು ಜಿಲ್ಲಾ ಘಟಕಕ್ಕೆ ಕಳಿಸಿ, ಅವರ ಸಲಹೆ–ಸೂಚನೆಗಳನ್ನು ಪಡೆಯಲಾಗಿರುತ್ತದೆ. ಆ ಕುರಿತು ಚರ್ಚಿಸಿ, ಅಂತಿಮ ತಿದ್ದುಪಡಿ ಕರಡು ರಚಿಸಲು ಚರ್ಚೆಗಾಗಿ ಎಲ್ಲಾ ಜಿಲ್ಲಾ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ರಾಜ್ಯ ಕಾರ್ಯಕಾರಿ ಸದಸ್ಯರ ಸಭೆಯನ್ನು ಬೇಗನೆ ಕರೆಯಬೇಕು. | ಈಗಾಗಲೇ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳ ಸಭೆಯನ್ನು ಕರೆದು ಸೂಕ್ತ ಸಲಹೆಗಳನ್ನು ಪಡೆದಿದ್ದೇವೆ. |

| | | |
|---|---|---|
| 4. | ಕಾರ್ಯಕಾರಿ ಸಮಿತಿಯನ್ನು ಪ್ರತಿ 3 ತಿಂಗಳಿಗೆ ಕಡ್ಡಾಯವಾಗಿ ಕರೆಯುವ ವ್ಯವಸ್ಥೆಯಾಗಬೇಕು. ರಾಜ್ಯ ಕಾರ್ಯಕಾರಿ ಸಮಿತಿ ಸಭೆಯೊಂದಿಗೆ ಎಲ್ಲಾ ಜಿಲ್ಲಾ ಅಧ್ಯಕ್ಷರ ಸಭೆಯನ್ನು ವರ್ಷದಲ್ಲಿ ಕನಿಷ್ಠ ಪಕ್ಷ ಎರಡು ಸಲ ಕರೆದಲ್ಲಿ ಮಹಾಸಭೆಯ ಕಾರ್ಯಚಟುವಟಿಕೆಗಳನ್ನು ಸಕ್ರಿಯವಾಗಿ ನಡೆಸಲು ಅನುಕೂಲವಾಗುತ್ತದೆ. | ಸೂಕ್ತ ಸಲಹೆಯಾಗಿದೆ.<br>ಈ ಬಗ್ಗೆ ಗಮನಹರಿಸಲಾಗುವುದು. |

5.ಶ್ರೀ ಸದಾನಂದ ಎಸ್. ಶಿವಳ್ಳಿ, ಧಾರವಾಡ

| | **ಚರ್ಚೆಯ ವಿಷಯ** | **ಉತ್ತರ** |
|---|---|---|
| 1. | ಧಾರವಾಡ ಜಿಲ್ಲಾ ಘಟಕದ ಸಮುದಾಯ ಭವನ ನಿರ್ಮಾಣಕ್ಕಾಗಿ ನೀಡಿದ ದೇಣಿಗೆದಾರರೆಲ್ಲರಿಗೂ ಸದಸ್ಯತ್ವ ನೀಡುವುದು. ಈ ಪೈಕಿ ಕೇವಲ 1 ಲಕ್ಷ ರೂಪಾಯಿ ದೇಣಿಗೆ ನೀಡಿದ ಕೆಲವು ಸದಸ್ಯರಿಗೆ ಮಾತ್ರ **ಮಹಾದಾನಿ** ಸದಸ್ಯತ್ವ ನೀಡಿದ್ದಕ್ಕೆ ಧನ್ಯವಾದಗಳು. ಹಾಗೇಯೇ ಇನ್ನುಳಿದ ಎಲ್ಲ ದೇಣಿಗೆದಾರರಿಗೆ ಅವರವರ ಮೊತ್ತಕ್ಕೆ ಅನುಗುಣವಾಗಿ ಸದಸ್ಯತ್ವ ನೀಡಲು ಕೋರುತ್ತೇನೆ. | ಇಂದಿನ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಈ ವಿಷಯವನ್ನು ಮಂಡಿಸಿ ನಿರ್ಣಯವನ್ನು ಸಹ ಮಾಡಲಾಗಿದೆ (ವಿಷಯ ಸಂಖ್ಯೆ 10 ಬಿ) |
| 2 | ನಾನು ಕೂಡ ಸದಸ್ಯತ್ವ ಕೋರಿ ಜಿಲ್ಲಾ ಘಟಕಕ್ಕೆ ಅರ್ಜಿಫಾರಂ ಕೊಟ್ಟಿದ್ದು, ನಿಮ್ಮ ಅರ್ಜಿಫಾರಂ ಕಳೆದುಹೋಗಿದ್ದು ಪುನಃ ತುಂಬಿ ಕೊಡಬೇಕೆಂದು ಜಿಲ್ಲಾ ಘಟಕದಿಂದ ನನಗೆ ಪತ್ರ ಬರೆದಿದ್ದರು. ಅದರಂತೆ ನಾನು ಅರ್ಜಿ ಫಾರಂ ಭರ್ತಿಮಾಡಿ ಎರಡು ಫೋಟೋ ಸಹಿತ ಪಡೆದು ಮಹಾದಾನಿ ಸದಸ್ಯತ್ವ ನೀಡಲು ಮಹಾಸಭೆಗೆ ಕಳುಹಿಸಿಕೊಟ್ಟಿರುತ್ತಾರೆ. ಆದಾಗ್ಯೂ ತಾವು ನನಗೆ ಇಲ್ಲಿಯವರೆಗೆ ಮಹಾದಾನಿ ಸದಸ್ಯತ್ವ ನೀಡಿರುವುದಿಲ್ಲ. ಈ ಸಭೆಯಲ್ಲಿ ಚರ್ಚಿಸಿ ನನಗೆ ಮತ್ತು ಉಳಿದ 54 ಜನ ದೇಣೀಗೆದಾರರಿಗೆ ಅಲ್ಲದೇ ಅರವಿಂದ ಬೆಲ್ಲದರವರು ನೀಡಿದ ರೂ.6,80,000/- ಮೊತ್ತಕ್ಕೆ ಅವರು ಸೂಚಿಸಿದವರಿಗೆ ಸದಸ್ಯತ್ವ ನೀಡಬೇಕು. | ಮಹಾಸಭೆಯ ಸಂವಿಧಾನದ ಪ್ರಕಾರ ಕ್ರಮ ಕೈಗೊಳ್ಳಲಾಗುವುದು |
| 3. | ಬೈಲಾ ತಿದ್ದುಪಡಿ ಸಹ ದಶಕಗಳಿಂದ ಚರ್ಚೆಯಲ್ಲಿಯೇ ಉಳಿದಿದ್ದು ಒಂದೆರಡು ತಿಂಗಳೊಳಗಾಗಿ ಆಧ್ಯತೆಯ ಮೇರೆಗೆ ವಿಶೇಷ ಸರ್ವಸಾದಾರಣ ಸಭೆ ಕರೆಯಬೇಕು. | ಪರಿಗಣಿಸಲಾಗುವುದು. |

6.ಶ್ರೀ ಕೆ.ಸಿ. ನಂಜುಂಡಸ್ವಾಮಿ, ರಾಜ್ಯ ಸಮಿತಿ ಸದಸ್ಯರು, ಕೊಡಗು

| | ಚರ್ಚೆಯ ವಿಷಯ | ಉತ್ತರ |
|---|---|---|
| 1. | ಕೊಡಗು ಜಿಲ್ಲೆ ಮಡಿಕೇರಿಯಲ್ಲಿರುವ ವೀರಶೈವ ರಾಜರ ಗದ್ದಿಗೆ ಹಾಗೂ ಕೋಟೆ ಅರಮನೆ ಕಟ್ಟಡ ಅಭಿವೃದ್ಧಿಪಡಿಸಲು ಹಾಗೂ ರಾಜರ ಪ್ರತಿಮೆಯನ್ನು ನಿರ್ಮಾಣ ಮಾಡುವ ಕುರಿತು. | ಈ ಕುರಿತು ರಾಜ್ಯ ಸರ್ಕಾರವನ್ನು ಕೋರಲಾಗುವುದು. |
| 2. | ಕುಶಾಲನಗರದ ಪಟ್ಟಣದ ಮಧ್ಯಭಾಗದಲ್ಲಿರುವ ಶ್ರೀ ಜೋಡಿ ಬಸವೇಶ್ವರ ದೇವಸ್ಥಾನದ 10 ಎಕರೆ ಜಾಗವನ್ನು ರಾಜ್ಯ ಸರ್ಕಾರವು ಆಸ್ಪತ್ರೆ ಕಟ್ಟಡಗಳು ಹಾಗೂ ನಿರ್ಗತಿಕರಿಗೆ ವಾಸಿಸಲು ಮನೆ ನಿರ್ಮಿಸಲು ಜಾಗ ನೀಡುವ ಸಲುವಾಗಿ ಸರ್ಕಾರ ವಶಪಡಿಸಿಕೊಂಡಿದ್ದು ಇಲ್ಲಿಯವರೆಗೂ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ. ಆದುದರಿಂದ ಈ ಜಾಗದಲ್ಲಿ ಇನ್ನು 4 ಎಕರೆ ಜಾಗವು ಖಾಲಿ ಇದ್ದು ಸರ್ಕಾರ ಮಟ್ಟದಲ್ಲಿ ಉಳಿದ ಜಾಗವನ್ನು ಸಮಾಜಕ್ಕೆ ಬಿಟ್ಟು ಕೊಡುವ ಬಗ್ಗೆ ಮನವಿ ಮಾಡಿದ್ದು ಇಲ್ಲಿಯವರೆಗೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಇದರ ಬಗ್ಗೆ ಸಭೆಯಲ್ಲಿ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕು. | ತಹಶೀಲ್ದಾರರಿಗೆ ಜಿಲ್ಲಾಧ್ಯಕ್ಷರ ಮೂಲಕ ಸರ್ಕಾರಕ್ಕೆ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಗುವುದು. |

7. ಶ್ರೀ ವಿ.ಕೆ.ಪಾಟೀಲ್, ವಕೀಲರು, ಬೆಳಗಾವಿ

| | ಚರ್ಚೆಯ ವಿಷಯ | ಉತ್ತರ |
|---|---|---|
| 1. | ಮಾಹಿತಿ ತಂತ್ರಜ್ಞಾನ ಮೊಬೈಲ್ ಯುಗದಲ್ಲಿ 100 ವರ್ಷಗಳ ಹಳೆಯದಾದ ಮಹಾಸಭೆಯ ಹೆಸರನ್ನು ಬದಲಾವಣೆ ಮಾಡಬೇಕು. ಅಂದರೆ ಅಖಿಲ ಭಾರತ ವೀರಶೈವ ಮಹಾಸಭೆಯ ಹೆಸರನ್ನು ಮಾರ್ಪಾಡು ಮಾಡಿ 'ಅಖಿಲ ಭಾರತ ಲಿಂಗಾಯತ ಮಹಾಸಭಾ' 'ರಿ' ಅಂತಾ ಬದಲಿಸಲು ಕ್ರಮ ಜರುಗಿಸಿರಿ. | ಮಹಾಸಭೆಯ ಈ ಹಿಂದಿನ 22 ಅಧ್ಯಕ್ಷರು ಮತ್ತು ಸಂಸ್ಥಾಪಕರಾದ ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ ಮೂಲ ಆಶಯದಂತೆ ಈಗಿರುವ ಹೆಸರನ್ನೇ ಉಳಿಸಿಕೊಳ್ಳಲಾಗಿದೆ. |
| 2. | ಅಖಿಲ ಭಾರತ ವೀರಶೈವ ಮಹಾಸಭೆಯು ಭಾರತ ಸರ್ಕಾರದಿಂದ ಲಿಂಗಾಯತ ಧರ್ಮ ಅಂತಾ ವಿಶೇಷ ಕೋಡ್ ಮಂಜೂರು ಮಾಡಿಸಿಕೊಳ್ಳಲು ಯಾಕೆ ಮೀನ ಮೇಷ ಮಾಡುತ್ತಿದೆ. ಮುಂದೆ ಯಾವ ಕ್ರಮ ಜರುಗಿಸಿರುವಿರಿ. | ಧರ್ಮದ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರದೊಂದಿಗೆ ಪ್ರಯತ್ನಿಸುತ್ತಿದ್ದು, ಈ ವಿಷಯವನ್ನು ಹಿಂಬಾಲಿಸಲಾಗುವುದು. |
| 3. | ಅಖಿಲ ಭಾರತ ವೀರಶೈವ ಮಹಾಸಭೆಯ ಕಾರ್ಯ ಚಟುವಟಿಕೆಗಳು ಆಮೆಯ ವೇಗದಲ್ಲಿದ್ದು ಲಿಂಗಾಯತ ಧರ್ಮದ ಸಂಘಟನೆ ಅಂತಾ ಯಾವಾಗ ತೊಡಗಿಸಿಕೊಳ್ಳುವುದು. | ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| 4. | ಅಖಿಲ ಭಾರತ ವೀರಶೈವ ಮಹಾಸಭೆಯು ಪ್ರತಿಯೊಂದು ಜಿಲ್ಲೆಗೆ ಉಚಿತ ವಸತಿ ವಿದ್ಯಾರ್ಥಿ ನಿಲಯಗಳನ್ನು ನಿರ್ಮಿಸುತ್ತವೆ ಅಂತಾ ತಾರೀಖು 13-1-2013ರಂದು ನಡೆದ ಮಹಾಸಭೆಯ ಸಾಮಾನ್ಯ ಸಭೆಯಲ್ಲಿ ತಿಳಿಸಿದ್ದು ಇನ್ನೂವರೆಗೆ ಯಾಕೆ? ಕಾರ್ಯಗತವಾಗಿರುವುದಿಲ್ಲ. | ಈಗಾಗಲೇ ಹಲವಾರು ಜಿಲ್ಲೆಗಳಲ್ಲಿ ಈ ಉದ್ದೇಶಕ್ಕಾಗಿ ನಿವೇಶನವನ್ನು ಪಡೆದಿರುತ್ತಾರೆ ಮತ್ತು ಪ್ರಗತಿಯಲ್ಲಿದೆ. |
| 5. | ಅದರಂತೆ 42ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಕಾರ್ಯಸೂಚಿಯಲ್ಲಿ ಲಿಂಗಾಯತ ಧರ್ಮದ ಬಗ್ಗೆಯಾಗಲಿ, ಲಿಂಗಾಯತ ಸಮಾಜದ ಕ್ಷೇಮಾಭಿವೃದ್ಧಿ ಸಲುವಾಗಿ ಯಾವುದೇ ಚರ್ಚೆಯ ಕಾರ್ಯಸೂಚಿ ಯಾಕೆ ಮಂಡಿಸಿರುವುದಿಲ್ಲ. | ಮಹಾಸಭೆಯ ಗುರಿ ಮತ್ತು ಧ್ಯೇಯೋದ್ದೇಶಗಳು ಸತತವಾಗಿ<br><br>ನಡೆಯುತ್ತಲೇ ಇರುತ್ತವೆ. |
| 6. | ಮಹಾಸಭೆಯು ಮುಂದಿನ ವರ್ಷ 2017 ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಹಾಕಿಕೊಂಡಿದ್ದೀರಿ. | ಜಿಲ್ಲೆಗಳಲ್ಲಿ ಭವನ ಮತ್ತು ಉಚಿತ ವಸತಿ ನಿಲಯಗಳ ಸ್ಥಾಪನೆ, ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಇತ್ಯಾದಿ.., |

8. ಶ್ರೀ ಟಿ.ಪಿ.ನಂಜಪ್ಪ, ಸೆಂಟ್ರಲ್ ಕಮಿಟಿ ಸದಸ್ಯರು

| | ಚರ್ಚೆಯ ವಿಷಯ | ಉತ್ತರ |
|---|---|---|
| 1 | ಮಾಲೂರು ತಾಲ್ಲೂಕು ಘಟಕ ರಚಿಸಿರುವ ಬಗ್ಗೆ:<br><br>ಇತ್ತೀಚೆಗೆ ಮಾಲೂರು ತಾಲ್ಲೂಕು ಘಟಕವನ್ನು ರಚಿಸಲಾಗಿದೆ. ಜಿಲ್ಲಾ ಅಧ್ಯಕ್ಷರಾದ ಶ್ರೀ ಎ.ಎನ್.ಸದಾಶಿವಯ್ಯ, ಉಪಾಧ್ಯಕ್ಷರಾದ ಶ್ರೀ ಟಿ.ಸಿ.ನಾಗರಾಜ್ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರು.ವಿಜಯಕುಮಾರ್ ಇವರುಗಳೇ ಸೇರಿ ಘಟಕವನ್ನು ರಚಿಸಿದ್ದು, ತಾಲ್ಲೂಕಿನ ಸದಸ್ಯರ ಗಮನಕ್ಕೆ ತಂದಿರುವುದಿಲ್ಲ ಹಾಗೂ ಪಟ್ಟಿಯಲ್ಲಿರುವ 10-12 ಜನ ಸಮಿತಿಯ ಸದಸ್ಯರುಗಳ ಅನುಮತಿಯನ್ನು ಪಡೆಯದೇ ಆಯ್ಕೆ ಮಾಡಿದ್ದು, ಈ ಸದಸ್ಯರುಗಳು ಘಟಕದಲ್ಲಿ ಮುಂದುವರಿಯಲು ಇಚ್ಛಿಸಿರುವುದಿಲ್ಲ. ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಿ ನ್ಯಾಯ ಒದಗಿಸಬೇಕೆಂದು ಕೋರುತ್ತೇನೆ. | ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲಾಗುವುದು. |

9. ಶ್ರೀ ಬಿ.ಎಸ್. ಗುರುನಾಥ್, ಉಪಾಧ್ಯಕ್ಷರು, ಹಾಸನ ಜಿಲ್ಲಾ ಘಟಕ

| | ಚರ್ಚೆಯ ವಿಷಯ | ಉತ್ತರ |
|---|---|---|
| 1. | ತಮ್ಮ ಪತ್ರ ಪ್ರಕಾರ ದಿನಾಂಕ:10–12–2016ರೊಳಗಾಗಿ ಚರ್ಚಿಸುವ ವಿಷಯಗಳನ್ನು ಕಳುಹಿಸಿಕೊಡಲು ಕೋರಿದೆ. ಆದರೆ ವಾರ್ಷಿಕ ವರದಿ ಲೆಕ್ಕ ಪತ್ರಗಳನ್ನು ಪರಿಶೀಲಿಸಲು ಮಹಾಸಭೆಯ ಜಾಲತಾಣದಲ್ಲಿ ವೀಕ್ಷಿಸಲು ಹೇಳಿರುವುದು ಸರಿಯಷ್ಟೇ. ಆದರೆ ಆ ಜಾಲತಾಣದಲ್ಲಿ ಲೆಕ್ಕ ಪತ್ರದ ವರದಿ ಇನ್ನು ಬಂದಿಲ್ಲ ಮತ್ತು ನಮಗೆ ಖುದ್ದಾಗಿ ಸಹ ನೀವುಗಳು ಕಳುಹಿಸಿಲ್ಲ. ವರದಿಯನ್ನು ಎಲ್ಲ ಸದಸ್ಯರಿಗೆ 8 ದಿನ ಮುಂಚಿತವಾಗಿ ಕಳುಹಿಸಬೇಕಾಗುತ್ತದೆ. | ಲೆಕ್ಕ ಪತ್ರಗಳನ್ನು ದಿನಾಂಕ: 12–12–2016ರಿಂದ ವೆಬ್‌ಸೈಟಿನಲ್ಲಿ ಹಾಕಲಾಗಿರುತ್ತದೆ. |
| 2. | ಕೇಂದ್ರ ಆಡಳಿತ ಮಂಡಳಿಯಲ್ಲಿ ನಡೆಯುವ ಕಾರ್ಯಕ್ರಮಗಳು ಹಾಗೂ ಎಲ್ಲಾ ಜಿಲ್ಲಾ ಘಟಕದ ಆಡಳಿತ ಮಂಡಳಿಯಲ್ಲಿ ನಡೆಯುವ ಕಾರ್ಯಕ್ರಮಗಳು ಮತ್ತು ಇತರ ಕಾರ್ಯಕ್ರಮಗಳ ವರದಿಯನ್ನು ತರಿಸಿಕೊಂಡು ಮಾಧ್ಯಮದಲ್ಲಿ 3 ತಿಂಗಳಿಗೊಮ್ಮೆ ಪ್ರಕಟಿಸಿ ಎಲ್ಲಾ ಜಿಲ್ಲೆಯ ಸದಸ್ಯರಿಗೆ ಕಳುಹಿಸಿಕೊಡಬೇಕಾಗುತ್ತದೆ. | ಗಮನಹರಿಸಲಾಗುವುದು. |
| 3. | ಪ್ರತಿ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕೇಂದ್ರದಲ್ಲೇ ನಡೆಸುವ ಬದಲು ಪ್ರತಿ ಜಿಲ್ಲಾ ಘಟಕದಲ್ಲಿ ಸಭೆಯನ್ನು ನಡೆಸಬಹುದು ಹಾಗೂ ಅದರ ವರದಿಯನ್ನು ಕೇಂದ್ರ ಆಡಳಿತ ಮಂಡಳಿ ತರಿಸಿಕೊಳ್ಳಬಹುದು. | ರಾಜ್ಯ ಮತ್ತು ಜಿಲ್ಲಾ ಘಟಕಗಳು ಸಭೆ ನಡೆಸಲು ಮನವಿ ಮಾಡಿದರೆ ಆ ಸ್ಥಳಗಳಲ್ಲಿ ಸರ್ವಸದಸ್ಯರ ಸಭೆ ಕರೆಯಲು ಕ್ರಮ ಜರುಗಿಸಲಾಗುವುದು. |
| 4. | ಕೇಂದ್ರದ ಆಡಳಿತ ಮಂಡಳಿಯ ನಿರ್ದೇಶಕರನ್ನು ಪ್ರತಿ ಜಿಲ್ಲೆಗೆ ಉಸ್ತುವಾರಿಯಾಗಿ ನೇಮಿಸುವುದು. | ಪರಿಗಣಿಸಲಾಗುವುದು |
| 5. | ಸರ್ವಸದಸ್ಯರ ಸಭೆಯ ದಿನವೇ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಚರ್ಚೆ ಮಾಡಲು ಸಮಯವಿರದ ಕಾರಣ ಮುಂಚಿತವಾಗಿ ಅದನ್ನು ಪರಿಶೀಲಿಸಬಹುದು. | ಅಂಚೆ ವೆಚ್ಚ ಜಾಸ್ತಿಯಾಗುವುದರಿಂದ ವೆಬ್‌ಸೈಟಿನಲ್ಲಿ ಹಾಕಲಾಗಿದೆ. ಸಹಕಾರವಿರಲಿ |

10. ಶ್ರೀ ಕೇದಾರನಾಥ ಶೇಟಕಾರ, ಬೀದರ್

| | ಚರ್ಚೆಯ ವಿಷಯ | ಉತ್ತರ |
|---|---|---|
| 1 | 2016–17ನೇ ಸಾಲಿನ ಮಹಾಸಭೆ ಲೆಕ್ಕ ಪರಿಶೋಧನೆ ಮಾಡಲು ನೇಮಕಾತಿ ಮಾಡುವ ಬಗ್ಗೆ.<br>ನಾನು ಕಳೆದ 8 ವರ್ಷಗಳಿಂದ ವಿವಿಧ ಸಂಘ ಸಂಸ್ಥೆಗಳ ಲೆಕ್ಕ ಪರಿಶೋಧನೆ ಮಾಡುತ್ತಿದ್ದು ನನ್ನ ಅರ್ಜಿಯನ್ನು ಸ್ವೀಕರಿಸಲು ಕೋರಿದ್ದಾರೆ. | ಈಗಾಗಲೇ 1974ರಿಂದಲೂ ಬಿ.ಆರ್.ವಿ.ಗೌಡ & ಕಂಪನಿಯವರು ಮಹಾಸಭೆಯ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸುತ್ತಿದ್ದು ಇವರ ಕೆಲಸ ತೃಪ್ತಿದಾಯಕವಾಗಿರುತ್ತದೆ. |

**ಸದಸ್ಯರಾದ ಶ್ರೀ ಎಲ್.ಎಸ್.ಮಲ್ಲಿಕಾರ್ಜುನ್, ಬೆಂಗಳೂರು ಇವರು ಮಾತನಾಡಿ,** ಇಂದಿನ ಸಭೆಯ ತಿಳುವಳಿಕೆ ಪತ್ರ ನನಗೆ ತಡವಾಗಿ ತಲುಪಿರುತ್ತದೆ. ಅದಕ್ಕಾಗಿ ನಾನು ಪತ್ರ ಬರೆಯಲು ಸಾಧ್ಯವಾಗಿರುವುದಿಲ್ಲ. ಇದಕ್ಕೆ ಕಾರಣ ತಿಳಿಸಬೇಕು ಎಂದರು.

**ಉಪಾಧ್ಯಕ್ಷರಾದ ಶ್ರೀ ಬಿ.ಎಸ್.ಸಚ್ಚಿದಾನಂದಮೂರ್ತಿಯವರು ಮಾತನಾಡಿ,** ಶ್ರೀ ಎಲ್.ಎಸ್. ಮಲ್ಲಿಕಾರ್ಜುನ್‌ರವರು ನೋಟೀಸ್ ತಡವಾಗಿ ತಲುಪಿರುವ ಬಗ್ಗೆ ಕೇಳುತ್ತಿದ್ದಾರೆ. ಅಂಚೆ ಕಛೇರಿಯ ವಿಳಂಬದಿಂದ ಈ ರೀತಿ ತಡವಾಗಿ ತಲುಪಿರಬಹುದು. ಮುಂದಿನ ದಿನಗಳಲ್ಲಿ ಸೂಕ್ತ ಸಮಯಕ್ಕೆ ತಲುಪಿಸುವ ವ್ಯವಸ್ಥೆ ಮಾಡಲಾಗುತ್ತದೆ. ಇಂದಿನ ತಿಳುವಳಿಕೆ ಪತ್ರಗಳನ್ನು ವೆಬ್‌ಸೈಟ್‌ನಲ್ಲಿಯೂ ಕೂಡಾ ಪ್ರಕಟಿಸಲಾಗಿತ್ತು ಎಂದರು.

**ಸದಸ್ಯರಾದ ಶ್ರೀ ಚಿದಾನಂದ ಮಠದ, ಹಾವೇರಿ ಇವರು ಮಾತನಾಡಿ,** ಎರಡು ವರ್ಷದ ಹಿಂದೆ ವೀರಶೈವ ಮಹಾಸಭೆಯ ಹಾನಗಲ್ ಕುಮಾರಸ್ವಾಮಿಗಳ ಸಭಾಂಗಣದಲ್ಲಿ ಕರ್ನಾಟಕ ರಾಜ್ಯದ ಹಾಲಿ ಮತ್ತು ಮಾಜಿ ಶಾಸಕರ, ಸಂಸದರ, ಸಚಿವರ ಸಭೆ ಕರೆದಿದ್ದಿರಿ. ಅದರ ನೇತೃತ್ವವನ್ನು ಮಹಾಸಭೆಯ ಅಧ್ಯಕ್ಷರು ವಹಿಸಿದ್ದರು. ಆಗ ಅವರು ಸಚಿವರಾಗಿದ್ದರು. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಸಮಾಜ ಬಾಂಧವರನ್ನು ಎಲ್ಲಾ ಹಂತದಲ್ಲೂ ನಿರ್ಲಕ್ಷಿಸುತ್ತಿದೆ. ಈ ಕುರಿತು ಉಭಯ ಸರ್ಕಾರಗಳ ಗಮನ ಸೆಳೆಯಲು ಬೆಂಗಳೂರಿನಂತಹ ಮಹಾನಗರದಲ್ಲಿ ಅರಮನೆ ಮೈದಾನದಲ್ಲಿ 5 ಲಕ್ಷ ಜನ ಸೇರಿಸಿ ನಮ್ಮ ಜನ ಸಂಘಟನೆಯನ್ನು ತೋರಿಸಿ ಸಂಘಟನೆಯ ಪ್ರದರ್ಶನ ಮಾಡುವಂತಹ ಕೆಲಸಕ್ಕೆ ಕೈಹಾಕುವ ಬಗ್ಗೆ ನಿರ್ಣಯ ಕೈಗೊಳ್ಳಲಾಗಿತ್ತು. ಈಗ ಏಕೆ ಈ ಕೆಲಸ ಮಾಡಬಾರದು?, ನಮ್ಮ ಶಕ್ತಿ ಪ್ರದರ್ಶನ ಏಕೆ ಮಾಡಬಾರದು? ಅದಕ್ಕೆ ನಮ್ಮೆಲ್ಲ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಸದಸ್ಯರು ಬೆಂಬಲ ನೀಡುತ್ತೇವೆ ಎಂದರು. ಈ ಕುರಿತು ಅಧ್ಯಕ್ಷರು ಸೂಕ್ತ ಸೂಚನೆ ನೀಡಬೇಕೆಂದು ವಿನಂತಿಸಿದರು. ಕರತಾಡನದ ಮೂಲಕ ಸಭೆಯು ಬೆಂಬಲ ಸೂಚಿಸಿತು.

**ಶ್ರೀ ಎಂ.ಎಸ್.ಕೋರಿಶೆಟ್ಟರ್, ಅಧ್ಯಕ್ಷರು, ಹಾವೇರಿ ಜಿಲ್ಲೆ ಇವರು ಮಾತನಾಡಿ,** ಸಮಾಜದ ಸಂಘಟನೆ ಮಾಡಬೇಕು. ಸಮಾವೇಶ ಮಾಡಬೇಕು ಎಂದು ಸದಸ್ಯರು ಹೇಳುತ್ತಿದ್ದಾರೆ. ಅದು ಒಳ್ಳೆಯ ವಿಷಯವಾಗಿದೆ. ಇಂದಿನ ದಿನದಲ್ಲಿ ಅದರ ಅವಶ್ಯಕತೆಯೂ ಇದೆ. ಬಹುಮುಖ್ಯವಾಗಿ ಒಳಪಂಗಡಗಳ ಸಂಘಟನೆಯಿಂದ ಅಖಿಲ ಭಾರತ ವೀರಶೈವ ಮಹಾಸಭೆಗೆ ಹಿನ್ನಡೆಯಾಗುತ್ತಿದೆ ಎಂಬುದನ್ನು ಎಲ್ಲರೂ ತಿಳಿಯಬೇಕು. ನಾವೆಲ್ಲಾ ಚಿದ್ರ ಚಿದ್ರ ಆಗುತ್ತಿರುವುದಕ್ಕೆ ನಮ್ಮ ಸರ್ಕಾರ, ಮುಖ್ಯಮಂತ್ರಿಗಳು ಹೀಗೆಲ್ಲಾ ಮಾಡುತ್ತಿದ್ದಾರೆ. ನಾವೆಲ್ಲರೂ ಒಗ್ಗಟ್ಟಾಗಬೇಕಾಗಿದೆ. ನಮ್ಮ ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಎಲ್ಲರೂ ಸಂಘಟಿತರಾಗಿ ಹೋರಾಟ ಮಾಡಿದರೆ ವೀರಶೈವ–ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯಬಹುದು. ಸಾವಿರಾರು ವರ್ಷಗಳ ಇತಿಹಾಸವಿದ್ದರು ಕೂಡಾ ಒಳಪಂಗಡಗಳಿಂದ ನಾವೆಲ್ಲಾ ಚಿದ್ರರಾಗುತ್ತಿದ್ದೇವೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಮನವಿ ಮಾಡಲು ಅಧ್ಯಕ್ಷರಲ್ಲಿ ಮನವಿ ಮಾಡುತ್ತೇನೆ. 5 ಲಕ್ಷ ಸೇರಿಸಿ ಸಮಾವೇಶ ಮಾಡಬೇಕು ಎಂದು ಸದಸ್ಯರು ಹೇಳುತ್ತಿದ್ದಾರೆ. ಆದರೆ 1 ಲಕ್ಷ ಜನರನ್ನು ಕೇಂದ್ರಕ್ಕೆ ಕರೆದುಕೊಂಡು ಹೋಗಿ ಈ ಹೋರಾಟವನ್ನು ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಗೆ ಒತ್ತಾಯ ತಂದು ಮಾಡಿಸಬೇಕು. ಕೇಂದ್ರ ಸರ್ಕಾರ ವೀರಶೈವ–ಲಿಂಗಾಯತ ಸ್ವತಂತ್ರ ಧರ್ಮ ಎಂದು ಒಪ್ಪಬೇಕು. ನಾವೆಲ್ಲಾ ಹಿಂದುಗಳಲ್ಲಾ ಎಂಬುದನ್ನು ಅವರಿಗೆ ಮನವರಿಕೆ ಮಾಡಬೇಕಾಗುತ್ತದೆ ಎಂದರು.

ಶ್ರೀ ವಿಜಯಕುಮಾರ್ ಹೆರೂರು, ಹೈದರಾಬಾದ್ ಇವರು ಮಾತನಾಡಿ,

We, Veerashaiva-Lingayats are more than 15 to 20 lakhs in the earst while united Andhra Pradesh now Telangana State and State of Andhra Pradesh and thickly populated in adjacent districts of Karnataka and Maharashtra Namely : Anantapur, Kurnool, Raichur, Gulbarga, Bidar, and Osmanabad, Nanded, Etc.,

We Veerashaiva LIngayats in Telugu speaking states, namely Telangana and Andhra Pradesh are in minority Status and we do not have much recognition either in the Social field, Political field & Educational field. Ours is less known community in both the States. We hardly have one I.A.S. officer and no I.P.S. officer so far and few Gazetted officers. Financially our people are not sound and educationally not upto the mark. Mainly our people are agriculture labourers artisans and daily wage earners. Due to the financial constrains our community people could not have any better education nor could employed in good position either in the central service or state service. We are very backward in all fields which made our community people through their Samajams, Organizations made several representations to include our community in the list of Backward Classes and they were fighting for the last more then 30 years. Finally all the Organizations and Samajams have come under one banner and made representation of on behalf of "Veerashaiva Lingayath Federation". With great help and co-operation of all Veerashaiva Samajams, Organizations, finally we succeeded in getting our Community included in the list of Backward Classes of the United Andhra Pradesh during the year 2009 and since then our Community people are progressing educationally and socially to a great extent. Our people's participation in the political field is also increased. We have one Member of Parliament (Lok Sabha) and several Mandal Presidents, Sarpanches and heading number of statutory committees. The status in the employment field has also brightened.

Our Community people are around 1 to 2 Crores spread all over in India, with more number in Karnataka State. The conditions of our Community people in other parts of the Country are more or less same in our part except in the State of Karnataka.

Our Veerashaiva Lingayats is a separate religion. We have our own independent philosophy, doctrine and tenets, rites and customs. Our philosophy mainly rest upon Shatsthala, Panchachara and Asthavarna. It has discarded Chaturvarna and Varnashrama and treated all on equal basis. Our religion disowns the Vedas and rituals of Hindu religion and oppose Yagna and Yaga. Our religion recognizes the right of widow to remarry and prohibit untouchability. While

enacting central laws namely Hindu succession Act, 1956, Hindu Minority and Guardianship Act, and Hindu, Marriage Act, described the Veerashaiva Lingayats as a sparate entity similar to Jains, Buddhist, Sikhs, etc.

The All India Veerashaiva Mahasabha made several representations to Government of India to recognize Veerashaiva Lingayat as a separate religion and issue necessary instructions to Census Authorities to issue separate code number during enumeration process for our Veerashaiva Lingayat community. During the March 2011 a huge gathering was organized at Basavakalyan in which Shri Sushil Kumar Shinde, former Home Minister Govt. of India had attended the said meeting. During the said proceedings, a resolution was adopted to the effect that Veerashaiva Lingayat is an independent religion and is to be recognized accordingly from Government of India for its progress and development.

On 13th November, 2016, a huge conference was held in Davanagere and due deliberations were held on the subject of Veerashaiva Lingayat being an independent religion. It expressed anguish for not recognizing Veerashaiva Lingayat as an independent religion like Jain, Sikhs inspite of 70 years of its Independence. In the said conference it was resolved to organize International LIngayat conference with coordiantion and cooperation of all organizations to achieve the pending issue of Veerashaiva Lingayat as an independent religion.

We humbly state sir, that this is the right time for the All India Veerashaiva Mahasabha to intensify its efforts in getting our long pending desires issue settled without any further delay. We the members from Telangana and Andhra Pradesh are wholeheartedly with you in achieving this goal. In our humble opinion we feel that a separate sub-committee is to be formed taking members from different States and have their experiences, with a single point program to bring pressure on the authorities to declare our, Veerashaiva Lingayat as an Independent religion.

**ಶ್ರೀ ನಾಗರತಿನಮ್, ಅಧ್ಯಕ್ಷರು, ತಮಿಳುನಾಡು ರಾಜ್ಯ ಘಟಕ ಇವರು ಮಾತನಾಡಿ,**

ತಮಿಳುನಾಡಿನಲ್ಲಿರುವ 30 ಜಿಲ್ಲೆಗಳಲ್ಲಿಯೂ ವೀರಶೈವ–ಲಿಂಗಾಯತರು ಇದ್ದಾರೆ. ಅವರೆಲ್ಲರನ್ನು ಒಗ್ಗೂಡಿಸಿ ಒಂದೇ ಸಂಘಟನೆಯ ಅಡಿಯಲ್ಲಿ ತರಬೇಕೆಂಬುದು ನಮ್ಮ ಆಶಯವಾಗಿದೆ. ತಮಿಳುನಾಡಿನಲ್ಲಿ 30 ಲಕ್ಷ ವೀರಶೈವ–ಲಿಂಗಾಯತರಿದ್ದು ಸುಮಾರು 50 ಉಪಪಂಗಡಗಳಿವೆ. ನಮ್ಮಲ್ಲಿ ಸಂಘಟನೆಯ ಕೊರತೆ ತುಂಬಾ ಇದೆ. ನಮ್ಮ ಉದ್ದೇಶ ಎಲ್ಲರೂ ಒಂದೇ ಸಂಘಟನೆಯ ಅಡಿಯಲ್ಲಿ ಇರಬೇಕು ಎಂಬುದು. ಧರ್ಮದ ಬಗ್ಗೆ ತಿಳುವಳಿಕೆ ನೀಡಬೇಕಾಗಿದೆ. ಮಧುರೈನಲ್ಲಿ ಒಂದು ಸಭೆ ಮಾಡಲಾಗಿದೆ. ಅದೇ ರೀತಿ ಚೆನ್ನೈನಲ್ಲಿಯೂ ಕೂಡಾ ಸಭೆ ಮಾಡಲಾಗಿದೆ. ನಾವೆಲ್ಲಾ ಒಂದೇ ಕೊಡೆಯ ಅಡಿಯಲ್ಲಿ ಬರಬೇಕು. ಕರ್ನಾಟಕದಲ್ಲಿ ಮಾಡುವ ರೀತಿ ಬೇರೆ ರಾಜ್ಯಗಳಲ್ಲಿಯೂ ಸಭೆಗಳನ್ನು ಮಾಡಬೇಕು.

ಬ್ಯಾರಿಸ್ಟರ್ ಎಂ.ಎಸ್.ಸರ್ದಾರವರು ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿದ್ದಾಗ 1939ರಲ್ಲಿ ಕುಂಬಕೋಣಂನಲ್ಲಿ 14ನೇ ಅಧಿವೇಶನವನ್ನು ಮಾಡಲಾಗಿರುತ್ತದೆ. ವೀರಶೈವ–ಲಿಂಗಾಯತ ಧರ್ಮದ ಬಗ್ಗೆ ತತ್ವಪ್ರಚಾರ ಮಾಡಬೇಕು. ನಮ್ಮ ಧರ್ಮಗುರುಗಳು ಬಂದು ಲಿಂಗಪೂಜೆಯ ಬಗ್ಗೆ ಅರಿವು ಮೂಡಿಸಬೇಕು. ಇತ್ತೀಚೆಗೆ ಮಧುರೈನಲ್ಲಿ ಒಂದು ಸಮಾವೇಶವನ್ನು ಮಾಡಿದೆವು. ಸಮಾವೇಶದಲ್ಲಿ ಮಹಾಸಭೆಯ ಅಧ್ಯಕ್ಷರಾದ ಡಾ.ಶಾಮನೂರು ಶಿವಶಂಕರಪ್ಪನವರು, ಶ್ರೀ ಕೆ.ಎನ್.ಜಯಲಿಂಗಪ್ಪನವರು, ಹಾಗೂ ಇತರ ಪದಾಧಿಕಾರಿಗಳು ಆಗಮಿಸಿದ್ದರು. ಸಮಾವೇಶದಲ್ಲಿ ಇಸ್ರೋದ ಅಧ್ಯಕ್ಷರಾದ ಡಾ. ಎ.ಎಸ್.ಕಿರಣ್ ಕುಮಾರ್‌ರವರನ್ನು ಕರೆದು ಸನ್ಮಾನ ಮಾಡಿದೆವು. ಚೆನ್ನೈನಲ್ಲಿ ಒಂದು ದೊಡ್ಡ ಸಮಾವೇಶವನ್ನು ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರನ್ನು ಕರೆದು ಮಾಡಬೇಕೆಂದಿದ್ದೇವೆ. ಎಲ್ಲರೂ ಈ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಆಹ್ವಾನಿಸಿದರು.

**ನಿಕಟಪೂರ್ವ ಅಧ್ಯಕ್ಷರಾದ ಡಾ.ಭೀಮಣ್ಣ ಖಂಡ್ರೆಯವರು ಮಾತನಾಡಿ,** ಇಂದು 42ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯು ನಡೆಯುತ್ತಿದೆ. ಒಗ್ಗಟ್ಟಿನಲ್ಲಿ ಬಲವಿದೆ. ನಾವೆಲ್ಲಾ ಒಗ್ಗಟ್ಟಾಗಿದ್ದರೆ ಮಾತ್ರ ಸರ್ಕಾರದಿಂದ ನಮಗೆ ಸಿಗಬೇಕಾದ ಎಲ್ಲ ಸವಲತ್ತುಗಳು ಸಿಗುತ್ತವೆ. (unity is strength, weakness is death) ನಮ್ಮಲ್ಲಿ ಒಗ್ಗಟ್ಟಿಲ್ಲದಿದ್ದರೆ ನಾವು ಹಿಂದುಳಿಯುತ್ತೇವೆ. ವೀರಶೈವ–ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಕೋಡ್‌ನಂಬರ್ ಪಡೆಯಲು ಸಾಕಷ್ಟು ಬಾರಿ ಪ್ರಯತ್ನ ಪಟ್ಟಿದ್ದೇವೆ. ಈ ಬಗ್ಗೆ 4–5 ಬಾರಿ ದೆಹಲಿಗೆ ಹೋಗಿದ್ದೇವೆ. ಶ್ರೀ ಎಲ್.ಕೆ.ಅಡ್ವಾನಿಯವರು ಗೃಹ ಸಚಿವರಾಗಿದ್ದಾಗ ನಮ್ಮ ಮನವಿಯನ್ನು ಅವರಿಗೆ ಸಲ್ಲಿಸಿದ್ದೆವು. ಅಡ್ವಾನಿಯವರು ನಮ್ಮ ಮನವಿಗೆ ಸೂಕ್ತವಾಗಿ ಸ್ಪಂದಿಸದೇ ಎಲ್ಲರೂ ಸ್ವತಂತ್ರ್ಯ ಧರ್ಮ ಎಂದು ಹೇಳಿದರೆ ಹೇಗೆ? ಹಾಗಾದರೇ ಹಿಂದುಗಳು ಯಾರು? ನಾವೆಲ್ಲಾ ಹಿಂದುಗಳೇ ಇದ್ದೇವೆ ಎಂದು ಖಡಾಖಂಡಿತವಾಗಿ ಹೇಳಿದರು. ನಂತರ ಬಂದ ಕೇಂದ್ರ ಸರ್ಕಾರದ ಗೃಹ ಸಚಿವರಾಗಿದ್ದ ಶ್ರೀ ಸುಶೀಲ್ ಕುಮಾರ್ ಸಿಂಧೆಯವರನ್ನು ಭೇಟಿಮಾಡಿ ನಮ್ಮ ಧರ್ಮದ ಬಗ್ಗೆ ವಿವರಿಸಿ ಹೇಳಿದೆವು. ಅವರಿಗೂ ಕೂಡಾ ನಮ್ಮ ಸಮಾಜದ ಬಗ್ಗೆ ಅಪಾರ ಗೌರವವಿದೆ. ನಮ್ಮ ಮನವಿಗೆ ಸ್ಪಂದಿಸಿ ಮನವಿಪತ್ರ ಕೊಡಲು ಹೇಳಿದ್ದರು. ಆ ಪ್ರಕಾರ ನಾವು ಮನವಿಪತ್ರವನ್ನು ಯು.ಪಿ.ಎ. ಅಧ್ಯಕ್ಷರಾಗಿದ್ದ ಶ್ರೀಮತಿ ಸೋನಿಯಾ ಗಾಂಧಿಯವರಿಗೆ ಹಾಗೂ ನಮ್ಮ ರಾಜ್ಯದ ಕೇಂದ್ರ ಸಚಿವರುಗಳಾಗಿದ್ದ ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ಆಸ್ಕರ್ ಫರ್ನಾಂಡಿಸ್, ಶ್ರೀ ಕೆ.ಹೆಚ್. ಮುನಿಯಪ್ಪ, ಶ್ರೀ ವೀರಪ್ಪ ಮೊಯ್ಲಿ, ಶ್ರೀ ರೆಹಮಾನ್ ಖಾನ್ ಇನ್ನು ಮುಂತಾದವರಿಗೆ ನಮ್ಮ ಮನವಿಯನ್ನು ಕೊಟ್ಟಿದ್ದೆವು. ಅವರೆಲ್ಲರೂ ಕೂಡಾ ನಮ್ಮೊಂದಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಇನ್ನು ಸ್ವಲ್ಪ ದಿನದಲ್ಲಿ ಸ್ವತಂತ್ರ್ಯ ಧರ್ಮದ ಮಾನ್ಯತೆ ದೊರಕುವುದರಲ್ಲಿತ್ತು. ಆದರೆ ಚುನಾವಣೆ ಘೋಷಣೆಯಾಗಿ ಆ ವಿಚಾರ ಅಲ್ಲಿಗೇ ಉಳಿಯಿತು.

ಪ್ರತಿಯೊಂದು ಸಭೆಯಲ್ಲೂ ನಾವು ವೀರಶೈವ, ಲಿಂಗಾಯತ, ಲಿಂಗಧರ ಎಲ್ಲರೂ ಒಂದೇ ಎಂದು ಹೇಳಿದ್ದೇವೆ. ಇದಕ್ಕೆ ಎಲ್ಲರೂ ಒಪ್ಪಿದ್ದಾರೆ. ಆದರೆ ಪ್ರಚಾರ ಆಗಿದ್ದು ಮಾತ್ರ ವೀರಶೈವ ಬೇರೆ ಲಿಂಗಾಯತ ಬೇರೆ ಎಂದು ಇದು ನಮ್ಮ ದುರ್ದೈವ. ಎಲ್ಲಾ ರಾಜ್ಯಗಳ ಮುಖಂಡರನ್ನು ಕರೆಸಿ ಶಕ್ತಿ ಪ್ರದರ್ಶನ ಮಾಡಬೇಕು. ನಮ್ಮಲ್ಲಿ ಒಳಪಂಗಡಗಳನ್ನು ಕಡೆಗಣಿಸಿ ವೀರಶೈವ ಲಿಂಗಾಯತ ಒಂದೇ ಎಂದು ಒಪ್ಪಿಕೊಳ್ಳಬೇಕು. ಎಲ್ಲಾ ಸಮಾಜದವರು ಒಗ್ಗಟ್ಟಾಗಿದ್ದಾರೆ. ನಾವು ಒಂದುಗೂಡದಿದ್ದರೆ ನಾವು ಹಿಂದುಳಿಯುತ್ತೇವೆ. ಹಿಂದುಳಿದ ವರ್ಗದ ನಾಯಕರಾದ ಶ್ರೀ ಅಠಾವಳೆಯವರು ಸಹ ನಮ್ಮ ಅಭಿಪ್ರಾಯವನ್ನು ಒಪ್ಪಿದ್ದಾರೆ. ಆದ್ದರಿಂದ ಇಡೀ ಭಾರತದಲ್ಲಿರುವ ಎಲ್ಲರನ್ನು ಸೇರಿಸಿಕೊಂಡು ನಮ್ಮ ಧರ್ಮಕ್ಕೆ **"ಅಲ್ಪಸಂಖ್ಯಾತ ಮಾನ್ಯತೆ"**ಯನ್ನು ಪಡೆಯಲು ಪ್ರಯತ್ನಿಸೋಣ ಎಂದರು.

**ವಿಷಯ ನಂ.10 (B): ಧಾರವಾಡ ಜಿಲ್ಲಾ ಘಟಕವು ನಿರ್ಮಿಸಿರುವ ಭವನಕ್ಕೆ "ವೀರಶೈವ–ಲಿಂಗಾಯತ ಭವನ"ವೆಂದು ಹೆಸರಿಡುವ ಬಗ್ಗೆ ಮತ್ತು ಈ ಸಂಬಂಧ ದಿನಾಂಕ: 25–02–2016ರಂದು ನಡೆದ ಮಹಾಸಭೆಯ ಕಾರ್ಯಕಾರಿ ಸಮಿತಿ ಸಭೆಯ ವಿಷಯ 2ರ ನಿರ್ಣಯದ ಮೇರೆಗೆ ದಿನಾಂಕ: 14–3–2016ರಂದು 43 ಜನರಿಗೆ ಮಹಾಸಭೆಯ ಸದಸ್ಯತ್ವವನ್ನು ನೀಡಿರುವ ಆದೇಶವನ್ನು ರದ್ದು ಮಾಡುವ ಬಗ್ಗೆ.**

**ಶ್ರೀ ಶಿವಾನಂದ ಅಂಬಡಗಟ್ಟಿ, ಮಾಜಿ ಶಾಸಕರು, ಧಾರವಾಡ ಇವರು ಮಾತನಾಡಿ,** (1) ಧಾರವಾಡ ಜಿಲ್ಲೆಯಲ್ಲಿ ಭವನವನ್ನು ನಿರ್ಮಾಣ ಮಾಡಲಾಗಿದೆ. ಇದಕ್ಕೆ ಅನೇಕ ದಾನಿಗಳು ದೇಣಿಗೆ ನೀಡಿದ್ದಾರೆ ಹಾಗೂ ಕರ್ನಾಟಕ ಸರ್ಕಾರವು ಕೂಡಾ ಕಟ್ಟಡ ನಿರ್ಮಾಣದ ಉದ್ದೇಶಕ್ಕಾಗಿಯೇ ಸುಮಾರು 2 ಕೋಟಿ ಹಣವನ್ನು ಬಿಡುಗಡೆ ಮಾಡಿದೆ. ಜಿಲ್ಲಾ ಘಟಕಗಳು ನಿರ್ಮಾಣ ಮಾಡುವ ಕಟ್ಟಡ/ಭವನಗಳಿಗೆ **"ವೀರಶೈವ–ಲಿಂಗಾಯತ ಭವನ"** ಎಂದು ಹೆಸರಿಡಬೇಕೆಂಬುದು ಮಹಾಸಭೆಯ ನಿಲುವು. ಆದರೆ ಈ ಭವನಕ್ಕೆ **ಲೀಲಾವತಿ ಚಂದ್ರಕಾಂತ ಬೆಲ್ಲದ ಕಲ್ಯಾಣ ಮಂಟಪ** ಎಂದು ಹೆಸರಿಡಬೇಕೆಂದು ಧಾರವಾಡ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಶಿವಣ್ಣ ಬೆಲ್ಲದರವರು ಜಿಲ್ಲಾ ಘಟಕದ ಪದಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಸಮಿತಿಯ ಸದಸ್ಯರುಗಳ ಗಮನಕ್ಕೆ ತರದೆ ತೀರ್ಮಾನಿಸಿದ್ದಾರೆ. ಸಮಾಜದ ಆಸ್ತಿಯಾಗಿರುವ ಈ ಭವನಕ್ಕೆ ಒಬ್ಬ ವ್ಯಕ್ತಿಯ ಹೆಸರನ್ನಿಡುವುದು ತಪ್ಪು. ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ನಿರ್ಮಾಣ ಮಾಡುವ ಕಟ್ಟಡ/ಭವನಗಳಿಗೆ **"ವೀರಶೈವ–ಲಿಂಗಾಯತ ಭವನ"** ಎಂದೇ ಹೆಸರಿಡಬೇಕು ಎಂದು ಇಂದಿನ ಸರ್ವ ಸದಸ್ಯರ ಸಭೆಯಲ್ಲಿ ನಿರ್ಣಯ ತೆಗೆದುಕೊಂಡು ಎಲ್ಲಾ ಜಿಲ್ಲಾ/ತಾಲ್ಲೂಕಾ ಘಟಕಗಳಿಗೆ ಕಳುಹಿಸಬೇಕು. ಹಾಗೂ

(2) ಭವನಕ್ಕೆ ದೇಣಿಗೆ ನೀಡಿರುವ ದಾನಿಗಳಿಗೆ ಮಹಾಸಭೆಯ ಸದಸ್ಯತ್ವವನ್ನು ನೀಡಿರುವುದು ಸಂವಿಧಾನಕ್ಕೆ ವಿರುದ್ಧವಾಗಿದೆ. ಏಕೆಂದರೆ ಮಹಾಸಭೆಯ ಸಂವಿಧಾನದ ಪ್ರಕಾರ ದೇಣಿಗೆದಾರರು ಸಂದಾಯ ಮಾಡಿರುವ ದೇಣಿಗೆ ಮೊತ್ತವು ಮಹಾಸಭೆಯ ಕೇಂದ್ರ ಕಛೇರಿಗೆ ಸಂದಾಯವಾಗಬೇಕು. ಆದರೆ ಇವರುಗಳಿಂದ ಸಂದಾಯವಾಗಿರುವುದಿಲ್ಲ. ಆದರೂ ನೀವು 43 ದಾನಿಗಳಿಗೆ ಮಾತ್ರ ಮಹಾಸಭೆಯ ಸದಸ್ಯತ್ವ ನೀಡಿರುವುದು ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದರು.

**ಮಹಾಸಭೆಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರು ಮಾತನಾಡಿ,** ಜಿಲ್ಲಾ/ತಾಲ್ಲೂಕ ಘಟಕಗಳು ಕಟ್ಟಡ/ಭವನವನ್ನು ನಿರ್ಮಾಣ ಮಾಡಿದರೆ ಆ ಕಟ್ಟಡ/ಭವನಗಳಿಗೆ **"ವೀರಶೈವ–ಲಿಂಗಾಯತ ಭವನ"** ಎಂದೇ ಹೆಸರಿಡಬೇಕು. ಈಗಾಗಲೇ ಧಾರವಾಡ ಜಿಲ್ಲಾ ಘಟಕವು ಧಾರವಾಡ ನಗರದಲ್ಲಿ ನಿರ್ಮಿಸಿರುವ ಕಟ್ಟಡ/ಭವನಕ್ಕೆ **"ವೀರಶೈವ–ಲಿಂಗಾಯತ ಭವನ"** ಎಂದು ಹೆಸರಿಡಬೇಕೆಂದು ಜಿಲ್ಲಾ ಅಧ್ಯಕ್ಷರಿಗೆ ಸೂಚನೆ ನೀಡಲಾಗಿದೆ. ಇದು ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳಿಗೂ ಅನ್ವಯಿಸುತ್ತದೆ.

ಧಾರವಾಡ ಜಿಲ್ಲಾ ಘಟಕವು ಒಳ್ಳೆಯ ಕೆಲಸ ಮಾಡಿದೆ ಎಂಬ ಉದ್ದೇಶದಿಂದ ಜಿಲ್ಲಾ ಅಧ್ಯಕ್ಷರು ಮತ್ತು ಇತರೇ ಪದಾಧಿಕಾರಿಗಳ ಜೊತೆ ಚರ್ಚಿಸಿ ರೂ. 1 ಲಕ್ಷ ಹಾಗೂ ಮೇಲ್ಪಟ್ಟು ದೇಣಿಗೆ ನೀಡಿದ 43 ದಾನಿಗಳಿಗೆ ಸದಸ್ಯತ್ವವನ್ನು ನೀಡಲಾಗಿತ್ತು. ನಂತರ ಅವರೇ ಉಳಿದ ದೇಣಿಗೆದಾರರಿಗೂ ಸದಸ್ಯತ್ವ ನೀಡುವಂತೆ ವಕೀಲರಿಂದ ನೋಟಿಸ್ ಕಳುಹಿಸಿರುತ್ತಾರೆ. ಕೆಲವೇ ದೇಣಿಗೆದಾರರಿಗೆ ಸದಸ್ಯತ್ವ ನೀಡಿರುವುದಕ್ಕೆ ಸದಸ್ಯರುಗಳಿಂದ ತಕರಾರುಗಳು ಬಂದಿರುತ್ತವೆ. ಕಾರ್ಯಕಾರಿ ಸಮಿತಿ ಸಭೆಯಲ್ಲಿಯೂ ಕೂಡ ಇದಕ್ಕೆ ವಿರೋಧ ವ್ಯಕ್ತವಾಗಿರುತ್ತದೆ. ಇವೆಲ್ಲಾ ತಕರಾರುಗಳನ್ನು ನೋಡಿದರೆ ದೇಣಿಗೆದಾರರಿಗೆ ನೀಡಿರುವ ಸದಸ್ಯತ್ವವನ್ನು ರದ್ದು ಮಾಡಬೇಕಾಗುತ್ತದೆ. ಈಗಾಗಲೇ ವಕೀಲರ ನೋಟಿಸಿಗೆ ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು ಮಹಾಸಭೆಯ ಸಂವಿಧಾನದನ್ವಯ ನಮ್ಮ ನಿಲುವನ್ನು ತಿಳಿಸಿರುತ್ತಾರೆ

**ನಿರ್ಣಯ:–**

1. **ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ಕಟ್ಟಡ/ಭವನಗಳನ್ನು ನಿರ್ಮಾಣ ಮಾಡಿದರೆ ಅದಕ್ಕೆ "ವೀರಶೈವ–ಲಿಂಗಾಯತ ಭವನ" ಎಂದೇ ಹೆಸರಿಡಬೇಕು. ಇದನ್ನು ಹೊರತುಪಡಿಸಿ ಬೇರಾವುದೇ ಹೆಸರನ್ನು ಅನಾವರಣ ಮಾಡಬಾರದೆಂದು**

2. **ಧಾರವಾಡ ಜಿಲ್ಲೆಯಲ್ಲಿ "ವೀರಶೈವ–ಲಿಂಗಾಯತ ಭವನ" ನಿರ್ಮಾಣಕ್ಕೆ 1 ಲಕ್ಷ ಮತ್ತು ಮೇಲ್ಪಟ್ಟು ದೇಣಿಗೆ ನೀಡಿರುವ 43 ಜನರಿಗೆ ಸದಸ್ಯತ್ವವನ್ನು ನೀಡುವ ಕುರಿತು ದಿನಾಂಕ: 25–02–2016ರಂದು ನಡೆದ ಮಹಾಸಭೆಯ ಕಾರ್ಯಕಾರಿ ಸಮಿತಿ ಸಭೆಯ ವಿಷಯ ನಂ. 2ರಲ್ಲಿ ತೆಗೆದುಕೊಂಡ ನಿರ್ಣಯವು ಸಂವಿಧಾನಕ್ಕೆ ವ್ಯತಿರಿಕ್ತವಾಗಿರುವುದರಿಂದ, ಆ ಎಲ್ಲಾ 43 ಸದಸ್ಯರುಗಳ ಸದಸ್ಯತ್ವವನ್ನು ರದ್ದುಗೊಳಿಸಿ ಆ ನಿರ್ಣಯವನ್ನು ಹಿಂಪಡೆಯಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.**

**ಸೂಚಕರು :– ಶ್ರೀ ಶಿವಾನಂದ ಅಂಬಡಗಟ್ಟಿ, ಮಾಜಿ ಶಾಸಕರು, ಧಾರವಾಡ**

**ಅನುಮೋದಕರು :– ಶ್ರೀ ಎಂ.ಎಸ್.ಕೋರಿಶೆಟ್ಟರ್, ಅಧ್ಯಕ್ಷರು, ಹಾವೇರಿ ಜಿಲ್ಲಾ ಘಟಕ, ಹಾವೇರಿ**

**ಅಧ್ಯಕ್ಷರ ಭಾಷಣ:–**

**ಡಾ.ಶಾಮನೂರು ಶಿವಶಂಕರಪ್ಪನವರು, ಮಾಜಿ ಸಚಿವರು ಇವರು ಮಾತನಾಡಿ,** 2015–16ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಗೆ ಆಗಮಿಸಿರುವ ಡಾ.ಭೀಮಣ್ಣ ಖಂಡ್ರೆಯವರಿಗೂ, ಎಲ್ಲಾ ಪದಾಧಿಕಾರಿಗಳಿಗೂ, ಎಲ್ಲ ಗಣ್ಯರಿಗೂ, ಮಹಿಳಾ ವಿಭಾಗದ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳಿಗೂ, ಎಲ್ಲಾ ಜಿಲ್ಲೆಗಳಿಂದ ಆಗಮಿಸಿರುವ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಎಲ್ಲಾ ಸದಸ್ಯರಿಗೂ ಎಲ್ಲಾ ಮಹನೀಯರು ಮತ್ತು ಮಹಿಳೆಯರಿಗೂ ವಂದನೆಗಳು. ಹಾಗೆಯೇ ಸಭೆ ನಡೆಸಲು ಸ್ಥಳಾವಕಾಶ ಮಾಡಿಕೊಟ್ಟ ಸಿರಿಗೆರೆಯ ತರಳಬಾಳು ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳಿಗೂ ತಮ್ಮ ಕೃತಜ್ಞತೆಗಳು ಹಾಗೂ ಮಹಾಸಭೆಯ ಮನವಿಗೆ ಸ್ಪಂದಿಸಿ ಇಂದು ಸನ್ಮಾನ ಸ್ವೀಕರಿಸಿದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ನಮ್ಮ ಸಮಾಜದ ಗಣ್ಯರುಗಳಿಗೂ ವಂದನೆಗಳು.

ಈಗಾಗಲೇ ಇಂದಿನ ಸಭೆಯಲ್ಲಿ ಬಹಳ ಉತ್ಸುಕವಾಗಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿಲಾಗಿದೆ. ಜಿಲ್ಲಾವಾರು ಲೆಕ್ಕ ಹಾಕಿದರೆ ಎಲ್ಲಾ ಜಿಲ್ಲೆಗಳಲ್ಲಿ ನಿವೇಶನ ಪಡೆದು ಕಟ್ಟಡ ಕಟ್ಟಬೇಕು. ಈಗಾಗಲೇ ದಾವಣಗೆರೆ, ಗುಲ್ಬರ್ಗಾ, ಶಿವಮೊಗ್ಗ, ಗದಗ, ಚಾಮರಾಜನಗರ ಜಿಲ್ಲೆಗಳಲ್ಲಿ ನಿವೇಶನಗಳನ್ನು ಖರೀದಿ ಮಾಡಿದ್ದಾರೆ. ಹಾವೇರಿ ಬಿಜಾಪುರ ಜಿಲ್ಲೆಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ. ಹಾಗೆಯೇ ಎಲ್ಲಾ ಜಿಲ್ಲೆಗಳಲ್ಲಿ ನಿವೇಶನ ಪಡೆದು ಭವನ ನಿರ್ಮಾಣ ಮಾಡಬೇಕೆಂಬ ಕೂಗು ಕೇಳಿ ಬರುತ್ತಿದೆ. ದಿನಾಂಕ 16–12–2016ರಂದು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ಪ್ರತಿಭಾ ಪುರಸ್ಕಾರ ಮತ್ತು ಮಹಿಳಾ ಸಮಾವೇಶ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಕಾರ್ಯಕ್ರಮದಲ್ಲಿ ಮಂತ್ರಿಗಳಾದ ಸನ್ಮಾನ್ಯ ಮಂಜುರವರು ಭಾಗವಹಿಸಿದ್ದರು. ಅವರು ಹಾಸನ ಜಿಲ್ಲಾ ಘಟಕಕ್ಕೆ ನಿವೇಶನ ಕೊಡುವುದಾಗಿ ಹೇಳಿದ್ದಾರೆ. ನಮ್ಮ ಸದಸ್ಯರು ಮಹಾಸಭೆಯಿಂದ ವಿದ್ಯಾಸಂಸ್ಥೆಯನ್ನು ಪ್ರಾರಂಭ ಮಾಡಿ ಹಾಗೂ ಬಡ ವಿದ್ಯಾರ್ಥಿಗಳಿಗೆ

ಹೆಚ್ಚಿನ ಸಹಾಯ ಮಾಡಲು ಹೇಳಿದ್ದಾರೆ. ವೀರಶೈವರಿಗೆ ಸರ್ಕಾರದಲ್ಲಿ ಯಾವ ರೀತಿಯ ಗೌರವ ಮತ್ತು ಪ್ರಾಮುಖ್ಯತೆಯನ್ನು ನೀಡುತ್ತಿಲ್ಲವೆಂದು ತಿಳಿಸಿದ್ದೀರಾ ನಮ್ಮದೂ ಅದೇ ಅಭಿಪ್ರಾಯವಾಗಿರುತ್ತದೆ. ಲಿಂಗೈಕ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾದ ಮೇಲೆ ನಮ್ಮ ಸಮಾಜಕ್ಕೆ ಯಾವುದೇ ಪ್ರಾಮುಖ್ಯತೆ ಇರುವುದಿಲ್ಲ. ನಾವೆಲ್ಲಾ ಒಗ್ಗಟ್ಟಾದರೆ ಇದಕ್ಕೆ ಬಲ ಬರುತ್ತದೆ ಎಂಬುದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ಬೆಂಗಳೂರಿನಲ್ಲಿ ಸಭೆ ಮಾಡಿ ಸಂಘಟನೆಯ ಶಕ್ತಿ ತೋರಿಸಬೇಕು ಎಂದು ಇಂದಿನ ಸಭೆಯಲ್ಲಿ ಚರ್ಚೆಯಾಗಿರುತ್ತದೆ. ಈ ಬಗ್ಗೆ ಎಲ್ಲಾ ಹಂತದ ಅಧ್ಯಕ್ಷರುಗಳ ಸಭೆ ಕರೆದು ನಿರ್ಣಯ ತೆಗೆದುಕೊಳ್ಳಬೇಕಾಗಿದೆ. ಸಂಘಟನೆಯನ್ನು ತೋರಿಸಿದಾಗ ನಮಗೆ ಬಲ ಬರುತ್ತದೆ.

ಹಾಗೆಯೇ ಧಾರವಾಡ ಜಿಲ್ಲೆಯಲ್ಲಿ ವೀರಶೈವ ಲಿಂಗಾಯತ ಭವನ ನಿರ್ಮಾಣಕ್ಕೆ ದೇಣಿಗೆ ನೀಡಿರುವ ದಾನಿಗಳಿಗೆ ಸದಸ್ಯತ್ವ ನೀಡಬೇಕೆಂದು ಜಿಲ್ಲಾ ಅಧ್ಯಕ್ಷರು ಕೇಳಿದರು. ಸದಸ್ಯತ್ವ ನೀಡಬಾರದೆಂದು ಒತ್ತಾಯವಿತ್ತು. ಆದಾಗ್ಯೂ ಧಾರವಾಡ ಜಿಲ್ಲಾ ಘಟಕದವರು ಒಳ್ಳೆಯ ಕೆಲಸ ಮಾಡಿದ್ದಾರೆ ಎಂಬ ಒಂದೇ ಕಾರಣದಿಂದ 1 ಲಕ್ಷ ಮೇಲ್ಪಟ್ಟು ದೇಣಿಗೆ ನೀಡಿದ ಸದಸ್ಯರಿಗೆ ಮಹಾಸಭೆಯ ಸದಸ್ಯತ್ವವನ್ನು ನೀಡಲಾಗಿದೆ. ಶ್ರೀ ಶಿವಣ್ಣ ಬೆಲ್ಲದರವರು ನಮ್ಮೊಂದಿಗೆ ಚರ್ಚೆ ಮಾಡಿದ್ದಾರೆ. ಈಗ ಪುನಃ ಬೇರೆ ಎಲ್ಲಾ ಸದಸ್ಯರಿಗೂ ಸದಸ್ಯತ್ವ ನೀಡಲು ಕೇಳುತ್ತಿದ್ದಾರೆ. ಈಗ ಎಲ್ಲರಿಂದಲೂ ಸದಸ್ಯತ್ವ ನೀಡಿರುವುದಕ್ಕೆ ತಕರಾರು ಬಂದಿರುವುದರಿಂದ 43 ಜನರಿಗೆ ನೀಡಿರುವ ಸದಸ್ಯತ್ವದ ಆದೇಶವನ್ನು ಹಿಂಪಡೆಯುವುದು ಅನಿವಾರ್ಯ. ಹಾಗೆಯೇ ಕಟ್ಟಡಕ್ಕೆ **"ವೀರಶೈವ-ಲಿಂಗಾಯತ ಭವನ"** ಎಂದು ಹೆಸರಿಡಲು ಸೂಚಿಸಲಾಗಿದೆ. ಎಲ್ಲಾ ರಾಜ್ಯ/ಜಿಲ್ಲಾ/ತಾಲ್ಲೂಕ ಘಟಕಗಳು ಭವನಗಳನ್ನು ನಿರ್ಮಾಣ ಮಾಡಿದರೆ ಭವನದ ಮುಂಭಾಗಕ್ಕೆ **"ವೀರಶೈವ ಲಿಂಗಾಯತ ಭವನ"** ಎಂದೇ ಹೆಸರಿಡಬೇಕು. ಈ ಕುರಿತು ಇಂದಿನ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ ಹಾಗೂ ಇದನ್ನು ಎಲ್ಲಾ ಘಟಕಗಳ ಅಧ್ಯಕ್ಷರುಗಳಿಗೂ ತಿಳಿಸಲಾಗುವುದು ಎಂದರು.

ತಾವೆಲ್ಲಾ ಹೆಚ್ಚು ಹೆಚ್ಚು ಸದಸ್ಯತ್ವವನ್ನು ಮಾಡಬೇಕು, ಸಮಾಜವನ್ನು ಕಟ್ಟಲು, ಒಟ್ಟುಗೂಡಿಸಲು ನಾವೆಲ್ಲಾ ಪ್ರಯತ್ನಿಸೋಣ ಎಲ್ಲರೂ ಸೇರಿ **'ಎಲ್ಲರೂ ಒಂದೇ'** ಎಂಬ ಬಸವಣ್ಣನವರ ತತ್ವಗಳನ್ನು ಹಾಗೂ ವಿಚಾರಗಳನ್ನು ಹರಡುವ ಕೆಲಸ ಜಾರಿಗೆ ತರೋಣ ಈ ಎಲ್ಲಾ ಕಾರ್ಯಗಳಿಗೆ ಮಾನ್ಯ ಸರ್ವಸದಸ್ಯರುಗಳ ಸಹಾಯ-ಸಹಕಾರ ಅಗತ್ಯ. ಹಾಗೆಯೇ **ಎಲ್ಲರಿಗೂ ಹೊಸ ವರ್ಷ ಹಾಗೂ ಸಂಕ್ರಾಂತಿ ಹಬ್ಬದ ಶುಭಾಷಯಗಳು.**

**12. ವಂದನಾರ್ಪಣೆ :-**

ಮಹಾಸಭೆಯ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಜಿ.ಎಂ.ಧನಂಜಯ, ಐ.ಎ.ಎಸ್.(ನಿ.) ಇವರು ಮಾತನಾಡಿ, ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಅಧ್ಯಕ್ಷರಿಗೂ, ಪದಾಧಿಕಾರಿಗಳಿಗೂ, ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೂ, ಸರ್ವಸದಸ್ಯರುಗಳಿಗೂ ಹಾಗೂ ಸರ್ವಸದಸ್ಯರ ಸಭೆ ನಡೆಸಲು ಸ್ಥಳಾವಕಾಶ ಮಾಡಿಕೊಟ್ಟ ಸಿರಿಗೆರೆಯ ತರಳಬಾಳು ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರಿಗೆ ಮತ್ತು ಮಹಾಸಭೆಯ ಸಿಬ್ಬಂದಿಯವರಿಗೂ ಧನ್ಯವಾದಗಳನ್ನು ತಿಳಿಸಿದರು.

**(ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವರು)**
ಅಧ್ಯಕ್ಷರು